Reg. No. M. 1550.

if not delivered please return to

"KODAGU" OFFICE MERCARA.

ಕೊಡಗು.

ಸರ್ವೇಷಾ ಭೂತಾದಯಯೇಯಂ ವಿದ್ಯಾ ನೀತಿ ಪ್ರಸಂಶ್ಯಕಾ। [ಜಕ್ಯಮುಕ್ತೇನ ದೇಶಾನಾಂ ಸುಸ್ಥಿರಾ ರಾಜ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೫ನೇ ಇಸವಿ ಡಿಸಂಬರ್ ತಾರೀಕು ೯ ನೇ **ಶುಕ್ರವಾರ.** | ಸಂಚಿಕೆ ೨೮

SARI-PIN.

EAR-RINGS (Thodus):
Cut-rubys Rs. 25 to 50
With diamond in centre Rs. 80 to 120

BRACELETS.
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive ahd inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.

Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry.

Telegrams: 'PRECIOUS.'

V. Subramaniar Jeweller,

Designs free on enquiry.

Telephone: 3145.

CATALOGUE ON ENQUIRY.

52–3 Post Box 423, Triplicane, P. O., MADRAS.

SANORIL
USE SANORIL FOR MALARIA
ಸನೋರಿಲ್ ಔಷಧಿಯನ್ನು ಉಪಯೋಗಿಸಿ ಮಲೇರಿಯಾಕ್ಕೆ ತುತ್ತಾಗುವುದನ್ನು ತಪ್ಪಿಸಿಕೊಳ್ಳಿ. ಎಲ್ಲಾ ಮಲೇರಿಯಾ ಜ್ವರಗಳಿಗೂ ಇದು ಒಳ್ಳೆಯದು. ಇದು ಎಲ್ಲಾ ಮಲೇರಿಯ ಔಷಧಿಗಳಿಗಿಂತಲೂ ಒಳ್ಳೆಯದೆಂದು ಪ್ರಸಿದ್ಧ ವೈದ್ಯರು ಹೇಳಿರುವರು. ಹಳೇ ಜ್ವರಕ್ಕೂ ಒಳ್ಳೆಯ ಗುಣಕಾರಿ.
SOLE AGENTS GORIO LTD. P.O. BOX 159, BOMBAY
AVAILABLE AT ALL CHEMISTS
26–24

ಎಂಪಯರ್ ಆಫ್ ಇಂಡಿಯಾ ಲೈಫ್ ಎಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನೆಯಾದದ್ದು 1897.)

1934ನೇ ಇಸವಿ ಮಾರ್ಚ 1ನೇ ತಾರೀಕಿನೊಳಗೆ ಹಕ್ಕಾಗುವ ಪೋಲಿಸಿಗಳ ಮೇಲೆ ಇಂಟರಿಮ್ ಬೋನಸು ಪ್ರತಿ ವರ್ಷಕ್ಕೆ 1000ಕ್ಕೆ ರೂ. 16ರಂತೆ ಹೋಲ್ ಲೈಫ್ ಎಷ್ಯೂರೆನ್ಸಿನ ಮೇಲೆಯೂ
ಮತ್ತು
1000ಕ್ಕೆ ರೂ. 14ರಂತೆ ಎಂಡೋಮೆಂಟ್ ಎಷ್ಯೂರೆನ್ಸಿನ ಮೇಲೆಯೂ ವಿಸಲ್ಪಟ್ಟಿವೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು:—
152–3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

52–10

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವಂಚಿತದ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00 000	28.2

ಬೋನಸ್ಸು.

ಕುರ್ಚು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸವೂಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸವೂಡಿ ಉತ್ತಮ ಕಮಿಶನ್ ದವದ ಸ್ಯಯೋಜನೆ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮುಚಂದ್ರರಾವ್,
ಸುಪರಿಂಟಿಡೆಂಟ್,
52—33 ಮಿಂಟೋ ಆಸ್ಪತ್ರೆ ಒಳ,
ಬೆಂಗಳೂರು.

ಕೊಡಗು.

ಸನ್ ೧೯೨೬ನೇ ಇಸವಿ

ಡಿಸೆಂಬರ್ ತಾ. ೯ನೇ ಶುಕ್ರವಾರ.

ಪ್ರೆಸ್ ಆಡ್ರೆನೇನ್ಸ್

ಜಾರಿಯಲ್ಲಿರುವ ಪರಿವಿಗೆ

ನಾವು

ಅಗ್ರಲೇಖನ

ಸನ್ನು

ಪ್ರಕಟಿಸುವುದಿಲ್ಲ.

ಅಧ್ಯಕ್ಷರ ಭಾಷಣದ ಸಾರಾಂಶ.

ಈ ತಾ. 4ರಲ್ಲು ನಾಪೋಕ್ಲುನಲ್ಲಿ ನಡೆದ ಅಖಿಲ ಕೊಡಗು ಉಪಾಧ್ಯಾಯರ ಸಂಘದ ಸಮ್ಮೇಳನದಲ್ಲಿ ಅಧ್ಯಕ್ಷರಾದ ಮೆ. ಎ. ರಾಮರಾಯರು ಮಾಡಿದ ಭಾಷಣದ ಸಾರಾಂಶ.

ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಮದ್ರಾಸಾಧಿಪತ್ಯವು ಒಹಳ ಮುಂದುವರಿದಿದೆ. ಹಿಂದುಳಿದ ಬಳ್ಳಾರಿ ಮೊದಲಾದ ಜಿಲ್ಲೆಗಳಲ್ಲಿಯೂ ಐದಾರು ಹೈಸ್ಕೂಲುಗಳಿವೆ. ಆದರೆ ಕೊಡಗಿನಲ್ಲಿ ಈಗಲೂ ವೆಸದಲಿದ್ದ ಮೂರು ಹೈಸ್ಕೂಲುಗಳೇ ಇವೆ. ಆದರೆ ಪ್ರಾಥಮಿಕ ವಿದ್ಯಾಭ್ಯಾಸದ ವಿಷಯದಲ್ಲಿ ಕೊಡಗು ಬೇರೆಯವರಿಗೆ ಮಾದರಿಯಾಗಿದೆ. ಆದರೆ ಕೆಲವು ವಿಷಯಗಳಲ್ಲಿ ಮದ್ರಾಸಾಧಿಪತ್ಯವು ಬಾಜಿನಲ್ಲೂ ಮುಂದುವರಿದಿದೆ. ಮದ್ರಾಸಿನ ಪ್ರಾಥಮಿಕ ವಿದ್ಯಾಭ್ಯಾಸದ ಆಕ್ಟು ಜಾರಿಗೆ ಬಂದ ನಂತರ ಪ್ರಾಥಮಿಕ ವಿದ್ಯಾಭ್ಯಾಸವು ಪ್ರಜೆಗಳಿಂದ ಚುನಾಯಿತರಾದ ಮಂತ್ರಿಗಳ ಅಧೀನದಲ್ಲಿದೆ. ಜಿಲ್ಲೆಗಳಲ್ಲಿಯೂ ಡಿ. ಬೋರ್ಡು ಮತ್ತು ಮುನ್ಸಿಪಾಲಿಟಿಯವರ ಕೈಕೆಳಗಿದೆ. ಇದಲ್ಲದೆ ಪ್ರತಿ ಜಿಲ್ಲೆಯಲ್ಲಿಯೂ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲ್ ಎಂಬ ಸಂಸ್ಥೆಯಿದೆ. ಇದರಲ್ಲಿ ಚುನಾಯಿತ ಮೆಂಬರುಗಳೇ ಹೆಚ್ಚಾಗಿರುವುದರಿಂದ ಜನರಿಗೆ ವಿದ್ಯಾಭ್ಯಾಸದ ಕ್ರಮಗಳನ್ನು ಬೇಕಾದ ಹಾಗೆ ಬದಲಾಯಿಸಲು ಅನುಕೂಲವಿದೆ. ಎರಡನೇದು—ಮದ್ರಾಸಿನ ಕೆಲವು ಜಿಲ್ಲೆಗಳಲ್ಲಿ ಕಡ್ಡಾಯವಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡಏರ್ಪಡಿಸಿರುವರು. ಕೊಡಗಿನಲ್ಲಿಯೂ ಹಾಗೆಯೇ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಮಾಡಲು ಪ್ರಯತ್ನಿಸಬೇಕು. ಒಂದೇ ಸಾರಿ ಎಲ್ಲಾ ಭಾಗಗಳಲ್ಲಿ ಏರ್ಪಡಿಸಲು ಸಾಧ್ಯವಿಲ್ಲದಿದ್ದರೂ, ಮೊದಲು ಮಡಿಕೇರಿ ಮತ್ತು ವೀರರಾಜಪೇಟೆ ಮುನ್ಸಿಪಾಲಿಟಿಗಳಲ್ಲಿಯೂ, ಅನಂತರ ನೋಟಿಫೈಡು ಏರಿಯಗಳಲ್ಲಿಯೂ ಜಾರಿಗೆ ತಂಬಹುದು. ಹೀಗೆ ಎಷ್ಟು ವರ್ಷ ಬೇರೆ ಬೇರೆ ಭಾಗಗಳಲ್ಲಿ ಕಡ್ಡಾಯವಾಗಿ ಮಾಡಿದರೆ ಕೆಲವು ವರ್ಷಗಳಲ್ಲಿ ಇಡಿ ದೇಶದಲ್ಲಿ ಓದು ಬರಹ ತಿಳಿಯದವರು ಇರಲಾರರು. ಅದಷ್ಟು ಬೇಗನೆ ಹಾಗೆ ಮಾಡಬೇಕೆಂದು ಕೋರುತ್ತೇನೆ.

ಮೂರನೇದು—ಈಗ ಮಕ್ಕಳ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವ ಹಣದ ಹೆಚ್ಚಿನ ಪಾಲು ವ್ಯರ್ಥವಾಗುತ್ತದೆ. ಇದು ಹ್ಯಾಗೆಂದರೆ—ಶಾಲೆಯ ಕೆಳಗಿನ ತರಗತಿಯಲ್ಲಿ 40 ರಿಂದ 50 ರ ವರಗೆ ಮಕ್ಕಳಿದ್ದರೆ ಐದನೇ ತರಗತಿಗೆ ತಲಪುವಷ್ಟರಲ್ಲಿ ಮಧ್ಯದಲ್ಲಿ ಅನೇಕರು ಬಿಟ್ಟು ಐದಾರು ಜನರೇ ಆಗುತ್ತಾರೆ. ಹೀಗೆ ಎಂಟನೇ ಅಥವಾ ಒಂಬತ್ತನೇ ತರಗತಿಗಳಲ್ಲಿ ಬಿಟ್ಟವರು ಕೆಲವು ತಿಂಗಳುಗಳಲ್ಲಿಯೇ ತಾವು ಕಲಿತದ್ದನ್ನು ಮರೆತು ನಿರಕ್ಷರ ಕುಕ್ಷಿಗಳಾಗುತ್ತಾರೆ. ಇವರ ಮೇಲೆ ಖರ್ಚು ಮಾಡಿದ ಹಣವು ನಿಷ್ಪ್ರಯೋಜನವಾಗುತ್ತದೆ. ಆದುದರಿಂದ ಪ್ರತಿಯೊಬ್ಬ ಬಾಲಕ ಬಾಲಕಿಯನ್ನು ಕೊನೆಯಪಕ್ಷ ಐದನೇ ತರಗತಿಯ ವರಗಾದರೂ ವಿದ್ಯೆಕಲಿಯಬೇಕು. ಮತ್ತು ಕೆಳಗಿನ ಒಂದೇ ತರಗತಿಯಲ್ಲಿ ವಿದ್ಯಾರ್ಥಿಗಳು ಎರಡು ಮೂರು ವರ್ಷಗಳು ನಿಂತುಕೊಳ್ಳುವುದರಿಂದಲೂ (Stagnation) ವಿದ್ಯಾಭ್ಯಾಸಕ್ಕೆ ಖರ್ಚು ಮಾಡಿದ ಹಣದ ಹೆಚ್ಚಿನ ಭಾಗವು ನಿಷ್ಪ್ರಯೋಜನವಾಗುವುದು. ಒಂದೇ ತರಗತಿಯಲ್ಲಿ ವಿದ್ಯಾರ್ಥಿಯು ಎರಡು ಮೂರು ವರ್ಷಗಳು ನಿಂತುಕೊಂಡ ನಂತರ ಅವನನ್ನು ಶಾಲೆಯಿಂದ ಬಿಡಿಸಿ, ಮನೆ ಕೆಲಸಗಳಿಗೆ ಹಚ್ಚುತ್ತಾನೆ. ಇಂಥಾ ಮಕ್ಕಳು ಸ್ವಲ್ಪ ಸಮಯದಲ್ಲೇ ತಾವು ಕಲಿತದ್ದನ್ನು ಮರೆಯುವರು. ಆದುದರಿಂದ ಪ್ರಾಥಮಿಕ ವಿದ್ಯಾಭ್ಯಾಸವನ್ನಾದರೂ ಕಡ್ಡಾಯ ಮಾಡಬೇಕು. ಹಿಂದುಳಿದ ಸಂಗಡಗಳ ಮಕ್ಕಳಿಗೆ ಕಡ್ಡಾಯ ಮಾಡುವುದರಲ್ಲಿ ಸ್ವಲ್ಪ ಕಾಲದ ವರೆಗೆ ನಿಧಾನಿಸಬಹುದು.

ನಾಲ್ಕನೇದು—ಕೊಡಗಿನಲ್ಲಿ ಬಾಲಚಮೂ ಪದ್ಧತಿ (Scouting) ಇಲ್ಲವೆಂದು ತಿಳಿದು ನಾನು ವಿಷಾಧಿಸುತ್ತೇನೆ. ಈ ಪದ್ಧತಿಯನ್ನೂ ಮಕ್ಕಳಿಗೆ ಕಲಿಸುವುದರಿಂದ ಅವರಿಗೆ ಜನಸೇವೆಯಲ್ಲಿಯೂ, ಸಾರ್ವಜನಿಕ ಕೆಲಸಗಳಲ್ಲಿಯೂ ಮನಸ್ಸು ಹುಟ್ಟುತ್ತದೆ. ನಾವು ನಮ್ಮ ನಮ್ಮ ಕುಟುಂಬಗಳನ್ನೂ ಕೋಮುಗಳನ್ನೂ ಪ್ರೀತಿಸುತ್ತೇವೆ ಹೊರತು ನಮಗೆ ರಾಷ್ಟ್ರಸೇವೆ ಮಾಡಬೇಕೆಂಬ ಭಾವನೆಯಿಲ್ಲ. ರಾಷ್ಟ್ರಸೇವೆಯಲ್ಲಿ ಜಾತಿ, ಕುಲ, ಕೋಮುಗಳನ್ನು ಮರೆತುಬಿಡಬೇಕು. ಬಾಲಚಮೂ ಪದ್ಧತಿಯು ನಮ್ಮಲ್ಲಿ ಈ ರೀತಿಯ ಹೊಸ ಭಾವನೆಯನ್ನು ಉಂಟುಮಾಡುತ್ತದೆ. ಆದುದರಿಂದ ಉಪಾಧ್ಯಾಯರಾದ ನೀವು ಇದರಲ್ಲಿ ತಂಬೆಶಕ್ತಿಯನ್ನು ಹೊಂದಿ ಇದನ್ನು ಇಲ್ಲಿ ಪ್ರಚಾರಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಈಗಿನ ದೊಡ್ಡ ಸಮಸ್ಯೆಯು ಪ್ರಾಥಮಿಕ ವಿದ್ಯಾಭ್ಯಾಸವಲ್ಲ. ಆದರೆ ಪ್ರಾಥಮಿಕ ವಿದ್ಯಾಭ್ಯಾಸದ ಮೂಲಕ ಪ್ರೌಢ ವಿದ್ಯಾಭ್ಯಾಸವನ್ನು ವೃದ್ಧಿಗೊಳಿಸುವುದಾಗಿದೆ. ಈಗಿನ ಕ್ರಮದ ಮೇರೆ ಪ್ರತಿಯೊಬ್ಬನಿಗೂ ತನಗೆ ಸರಕಾರಿ ಕೆಲಸ ಸಿಕ್ಕಬೇಕೆಂದೂ, ಪಟ್ಟಣದಲ್ಲಿ ವಾಸಮಾಡಬೇಕೆಂದೂ ಯೋಚನೆ ಇದೆ ಅವರನ್ನು ಇದಕ್ಕಾಗಿ ನಾನು ದೂಷಿಸುವುದಿಲ್ಲ. ಯಾಕೆಂದರೆ, ಒಬ್ಬನು ತನ್ನ ಆರನೆಯ ವರ್ಷದಿಂದಲೇ ಈ ವಿದ್ಯಾಭ್ಯಾಸವನ್ನು ಕೈಕೊಂಡು ತಂದೆ ತಾಯಿಗಳ ವೃತ್ತಿಯಿಂದ ಪೂರ್ತಿಯಾಗಿ ಬೇರ್ಪಡಿಸಲ್ಪಡುತ್ತಾನೆ. ಆದ್ದರಿಂದ ತಂದೆ ತಾಯಿಗಳು ತಮ್ಮ ವೃತ್ತಿಯಲ್ಲಿ ಸಹಾಯಮಾಡೆಂದು ಕೇಳಿದರೆ, ಉದ್ದವೋರೆ ಮಾಡಿಕೊಂಡು ತನಗೆ ಓದಲಿಕ್ಕಿದೆಯೆಂದು ಹೇಳುತ್ತಾನೆ. ತಂದೆಯು ಅವನಿಗೆ ಸ್ವಲ್ಪ ಹಣವನ್ನು ಖರ್ಚುಮಾಡಿರುವುದರಿಂದ ಅವನನ್ನು "ಸಭ್ಯ"ನಂತೆ ಕಾಣಬೇಕೆಂದು ಯೋಚಿಸುತ್ತಾನೆ. ಹೀಗಾಗಿ ಅತನು ತನ್ನ ತಂದೆ ತಾಯಿಗಳ ವೃತ್ತಿಯನ್ನು ಕಲಿಯದ ಹೋಗುತ್ತಾನೆ. ಅತನು ಸ್ಕೂಲಿನ ಮೇಲೆ ಕೂತುಕೊಂಡು ಕಚೇರಿಗಳಲ್ಲಿ ಲೇಖನಿ ಓಡಿಸುವುದು (Quill driving) ಬಹಳ ಪಾರ್ಯಾದೆ ಕೆಲಸವೆಂದು ಭಾವಿಸುತ್ತಾನೆ. ಆದ್ದರಿಂದ ಶಾಲೆಯು ವಿಷಯಗಳಿಗೂ, ಮನೆ ಕೆಲಸಕ್ಕೂ ಸಂಬಂಧಿಸುವಂತೆ ಮಾಡಬೇಕು. ಈ ರೀತಿ ಮನೆಯ ವೃತ್ತಿಯಲ್ಲಿ ಅಭ್ಯಾಸ ಸಿಕ್ಕುವಂತೆ ಮಾಡಬೇಕು. ಅಂದರೆ ವ್ಯವಸಾಯಗಾರನ ಮಗನು ಉತ್ತಮ ವ್ಯವಸಾಯಗಾರನೂ, ವ್ಯಾಪಾರಗಾರನ ಮಗನು ಉತ್ತಮ ವ್ಯಾಪಾರಿಯೂ, ಕುಂಬಾರನ ಮಗನು ಉತ್ತಮ ಕುಂಬಾರನೂ ಆಗುವಂತ ವಿದ್ಯೆಯನ್ನು ಕೊಡಬೇಕು. ಕೊಡಗಿನ ಶಾಲೆಗಳಲ್ಲಿ ತೋಟಗಾರಿಕೆ, ಬೆತ್ತದ ಕೆಲಸ ಕಲಿಸುವುದು ವಗೈರೆ ಇವೆಯೆಂದು ಕೇಳಿ ಸಂತೋಷಪಡುತ್ತೇನೆ. ಆದರೆ ಇವುಗಳನ್ನು ಶಾಲೆಗಳಲ್ಲಿ ಕಲಿಸಿದರೆ ಮಾತ್ರ ಸಾಲದು. ಶಾಲೆ ಬಿಟ್ಟ ಮೇಲೆ ವಿದ್ಯಾರ್ಥಿಗಳು ಸದರಿ ವೃತ್ತಿಗಳಿಂದ ತಮ್ಮ ಜೀವನವನ್ನು ಸಂಪಾದಿಸುವ ಹಾಗಿರಬೇಕು. ನೆಯಿಗೆ ಕೆಲಸವನ್ನು ಕಲಿತಿದ್ದರೆ ಮನೆಯಲ್ಲಿ ಚಾಂಕ ಮತ್ತು ಮಗ್ಗಗಳನ್ನು ಇಟ್ಟು ಮನೆಯ ಪ್ರತಿ ವ್ಯಕ್ತಿಯೂ ಕೆಲಸ ಮಾಡುವಂತಿರಬೇಕು. ಉದಾಹರಣೆಗಾಗಿ, ನಿಮ್ಮ ಶನಿವಾರಸಂತೆ ಶಾಲೆಯಲ್ಲಿ ನೆಯಿಗೆ ಕಲಿಸುತ್ತಾರೆ. ಈಗ ಸಾಧಾರಣ 18 ರಿಂದ 20 ವರ್ಷಗಳಿಂದ ಹಣ ಖರ್ಚು ಮಾಡುತ್ತಿರುವ ಈ ಶಾಲೆಯಿಂದ ದೇಶಕ್ಕೆ ಪ್ರಯೋಜನವಿದೆಯೋ ಅಥವಾ ಪ್ರದರ್ಶನದಲ್ಲಿ ತೋರಿಸಿದ ಕೆಲವು ಮೂದರಿ ಬಟ್ಟೆಗಳು ಮಾತ್ರ ತಯಾರಾಗುತ್ತದೋ ? ಎರಡನೇ ಕೆಲಸ ಮಾತ್ರ ಆಗುತ್ತಿದ್ದರೆ ಅದನ್ನು ಮುಚ್ಚಿಬಿಡುವುದೇ ಲೇಸು. ಆದರೆ ಪ್ರತಿ ವರ್ಷ ಹತ್ತು ಹನ್ನೆರಡು ಉಪಾಧ್ಯಾಯರನ್ನು ಈ ಶಾಲೆಗೆ ತಂಬೇತಿಗೆ ಕಳುಹಿಸಿ, ಅವರು ತಿರುಗಿ ತಮ್ಮ ತಮ್ಮ ಗ್ರಾಮಶಾಲೆಗಳಿಗೆ ಹೋಗಿ, ವಿದ್ಯಾರ್ಥಿಗಳಿಗೂ ಗ್ರಾಮಸ್ಥರಿಗೂ ನೆಯಿಗೆ ಕಲಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ. ಇದಕ್ಕಾಗಿ ಪ್ರತಿ ಶಾಲೆಗೆ ಸರಕಾರದಿಂದ ಮಗ್ಗಗಳನ್ನು ಕೊಡಬೇಕು. ಶಾಲೆ ಬಿಟ್ಟ ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಗಳಲ್ಲಿ ಮಗ್ಗಗಳನ್ನಿಟ್ಟು ಕೆಲಸಮಾಡಬೇಕು. ಹೀಗೆ ತಯಾರಾದ ಸ್ವದೇಶಿ ಬಟ್ಟೆಯು ಸ್ವಲ್ಪ ಪ್ರಿಯವಾದರೂ, ಗಟ್ಟಿಯುಳ್ಳದ್ದಾಗಿ ತಮ್ಮವರೇ ಮಾಡಿದ್ದಾಗಿರುವುದರಿಂದ ಜನರು ಅವುಗಳನ್ನು ಕೊಂಡುಕೊಂಡು ಪ್ರೋತ್ಸಾಹಿಸಬೇಕು. ಇಂಥ ಕೈಗಾರಿಕೆಗಳನ್ನು ನೀವು ವ್ಯವಸಾಯಕ್ಕೆ ಬೇಕಾಗುವ ನಾಲ್ಕು ತಿಂಗಳಲ್ಲಿಯಲ್ಲದೆ ಇತರ ಸಮಯದಲ್ಲಿ ಉಪವೃತ್ತಿಯಾಗಿ ಕೈಕೊಳ್ಳಬಹುದು. ಈಗ ಪ್ರತಿಯೊಬ್ಬನು ತನ್ನ ಭೂಮಿಯನ್ನು ಮಾತ್ರ ನಂಬಿಕೊಂಡಿದ್ದಾನೆ. ಈಗಿನಂತೆ ಭೂಮಿಯನ್ನು ವಿಭಾಗ ಮಾಡುತ್ತಾ ಹೋದಲ್ಲಿ ಕೊನೆಗೆ ಅವನಿಗೆ ತಾನು ನಿಂತ ಸ್ಥಳವೇ ತನ್ನ ಆಸ್ತಿಯಾಗುವ ಸಂಭವವಿದೆ. ಆದ್ದರಿಂದ ಸುಖದಿಂದ ಜೀವಿಸಬೇಕಾದರೆ ಇಂಥ ಉಪವೃತ್ತಿಗಳನ್ನು ಕೈಕೊಳ್ಳಬೇಕು.

ಈ ವಿಷಯದಲ್ಲಿ ತಿರುವಾಂಕೂರಿನ ಮಾರ್ತಾಂಡಮ್‌ನಲ್ಲಿ ವೈ. ಯಂ. ಸಿ. ಎ ಸಂಸ್ಥೆಯವರು ಒಳ್ಳೆ ಕೆಲಸ ಮಾಡುತಿದ್ದಾರೆ. ಅವರು ನೆಯಿಗೆ, ಉತ್ತಮ ರೀತಿಯಲ್ಲಿ ಕೋಳಿ ಸಾಕುವುದು, ಜೇನು ಹುಳುಗಳನ್ನು ಸಾಕುವುದು ಮೊದಲಾದ ವುಗಳನ್ನು ಕಲಿಸುತ್ತಿರುವರು. ಸಾಧಾರಣ ಕೋಳಿಗಳು ವರ್ಷಕ್ಕೆ ಸುಮಾರು 60 ರಿಂದ 70 ಮೊಟ್ಟೆಗಳನ್ನು ಇಡುವುದಾದರೆ ಉತ್ತಮ ಜಾತಿಯ ಕೋಳಿಗಳು ವರ್ಷಕ್ಕೆ 300 ಮೊಟ್ಟೆಗಳನ್ನಿಡುವವು. ಅದಲ್ಲದೆ ಮೊದಲನೆಯವುಗಳ ಮೊಟ್ಟೆಯು ಒಂದು ಔನ್ಸು ತೂಕವಿದ್ದರೆ ಎರಡನೆಯವುಗಳ ಮೊಟ್ಟೆಗಳು ಮೂರು 3 ರಿಂದ 4 ಔನ್ಸುಗಳ ತೂಕವಿರುತ್ತವೆ. ಈ ವಿಷಯವನ್ನು ಕೊಡಗಿನ ಶಾಲೆಗಳಲ್ಲಿ ಪ್ರಚಾರಗೊಳಿಸಬಹುದು. ಇದಕ್ಕಾಗಿ ಏಪ್ರಿಲ್ ತಿಂಗಳಿಂದ 3 ತಿಂಗಳ ವರೆಗೆ ತರಬೇತು ಕೊಡುವ ಮಾರ್ತಾಂಡಮ್‌ನ ಶಾಲೆಗೆ ಕೆಲವು ಉಪಾಧ್ಯಾಯರನ್ನು ತರಬೇತಿಗೆ ಕಳುಹಿಸಬಹುದು. ಅಲ್ಲದೆ ಶಾರದಾಶ್ರಮದ ಸ್ವಾಮಿಯವರಿಂದ ಜೇನು ನೊಣಗಳನ್ನು ಸಾಕಿ, ಹೆಚ್ಚು ಜೇನು ಸಂಗ್ರಹಿಸುವುದನ್ನು ಕಲಿಯಬಹುದು. ಅಲ್ಲದೆ ದನಗಳನ್ನು ತೆಗೆದುಕೊಂಡರೆ, ಒಂದು ಸಾಧಾರಣದ ಹಸುವನ್ನು ಸಾಕಲಕ್ಕೂ, ಉತ್ತಮ ತರದ ಹಸುವನ್ನು ಸಾಕಲಿಕ್ಕೂ ಖರ್ಚಿನಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಆದರೆ ಉತ್ತಮ ತರದ ಹಸುವಿನಿಂದ ಹೆಚ್ಚು ಹಾಲು, ಹೆಚ್ಚು ಬೆಣ್ಣೆ ಸಿಕ್ಕುತ್ತದೆ. ಆ ಜಾತಿಯ ಎತ್ತುಗಳು ಹೆಚ್ಚು ಕೆಲಸ ಮಾಡುತ್ತವೆ. ನಮ್ಮ ಶಾಲೆಗಳಲ್ಲಿ ಇಂಥ ವಿಷಯಗಳನ್ನು ಕಲಿಸಿದರೆ ತಂದೆ ತಾಯಿಗಳಿಗೆ ಸಹಾಯವಾಗುತ್ತದೆ. ಉಪಾಧ್ಯಾಯರು ಮಕ್ಕಳಿಗೆ ಮಾತ್ರವಲ್ಲದೆ ತಂದೆ ತಾಯಿಗಳಿಗೂ ಉಪಾಧ್ಯಾಯರಾಗಿರಬೇಕು.

ಪೂರ್ವದಲ್ಲಿ ಉಪಾಧ್ಯಾಯರಿಗೆ ತುಂಬಾ ಗೌರವವಿತ್ತು. ಈಗ ಕಡಿಮೆಯಾಗಲು ಕಾರಣವೇನು ? ನಾಲ್ಕು ಐದು ಮೈಲುಗಳ ದೂರದಿಂದ ಬರುವ ಉಪಾಧ್ಯಾಯರು ಸೇರಿದ ಕಕ್ಷ ಕೆಲಸ ಮಾಡಲು ಸಾಧ್ಯವಿಲ್ಲ. ಉಪಾಧ್ಯಾಯರು ಗ್ರಾಮಸ್ಥರೊಡನೆ ವಿಳಿತವಾಗಿ ಅವರನ್ನು ಅಭಿವೃದ್ಧಿಗೊಳಿಸಬೇಕಾದರೆ ಅವರಿಗೆ ಸರಕಾರವು ಶಾಲೆ ಹತ್ತಿರ ವಾಸಕ್ಕೆ ಮನೆಗಳನ್ನು ಕಟ್ಟಿಸಿಕೊಡಬೇಕು. ಹೀಗೆ ಕಟ್ಟಿದ ಮನೆಗಳಲ್ಲಿ ಉಪಾಧ್ಯಾಯರಿದ್ದು, ಅವರು ಗ್ರಾಮಸ್ಥರಿಗೆ ಮಾದರಿ ಮನುಷ್ಯರಾಗಿರಬೇಕು. ಅವರು ಸ್ವಾರ್ಥತ್ಯಾಗಿಗಳಾಗಿರಬೇಕು. ಹೀಗಿದ್ದರೆ ಅವರಿಗೆ ತುಂಬಾ ಗೌರವವು ಸಿಕ್ಕುವುದು.

ಇನ್ನೊಂದು ಮುಖ್ಯ ವಿಷಯವೇನೆಂದರೆ—ಪ್ರಾಯ ಪ್ರಬುದ್ಧರ ವಿದ್ಯಾಭ್ಯಾಸ (Adult Education) ಮತ್ತು ಗ್ರಾಮೋಭಿವೃದ್ಧಿ. ಯುವಕರಿಗೆ ಓದು ಬರಹ ಮಾತ್ರವಲ್ಲದೆ ಜೀವನಕ್ಕೆ ಬೇಕಾದ ಎಲ್ಲಾ ತಿಳುವಳಿಕೆಗಳನ್ನು ಕೊಡಲು ಪ್ರಯತ್ನಿಸಬೇಕು. ನಾನು ರಾಜಮಹೇಂದ್ರಿ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲನಾಗಿದ್ದಾಗ ಇತರರ ಸಹಾಯದಿಂದ ಪ್ರಾಯ ಪ್ರಬುದ್ಧರ ಶಾಲೆಯನ್ನು ತೆರೆದು ಭಗವದ್ಗೀತೆ, ಪುರಾಣ, ವಾಡಿಕೆಯ ಪತ್ರಿಕೆಗಳನ್ನು ಓದುವುದು ಮುಂತಾ ಪುರುಷರ ಜೀವನ ಚರಿತ್ರೆಗಳನ್ನು ಹೇಳಿಕೊಡುವುದು, ಇತರ ದೇಶಗಳ ಜೀವನ ಕ್ರಮವನ್ನು ತಿಳಿಸುವುದೂ, ಆರೋಗ್ಯ ಸೂತ್ರಗಳನ್ನು ತಿಳಿಸುವುದೂ ಮೊದಲಾದ ವಿಷಯಗಳನ್ನು ಕಲಿಸುತ್ತಿದ್ದೆನು. ನಮ್ಮ ಉಪಾಧ್ಯಾಯರು ಗ್ರಾಮಾಂತರಗಳಲ್ಲಿ ಈ ರೀತಿ ಕೆಲಸ ಮಾಡಿದರೆ ದೇಶವು ಬೇಗನೆ ಮುಂದುವರಿಯುವುದು.

ಇತರ ಇಲಾಖೆಯ ಉದ್ಯೋಗಸ್ಥರು ತತ್ಕಾಲಿಕ ಅಡಳಿತವನ್ನು ನಡೆಸುತ್ತಿದ್ದಾರೆ. ಅವರು ಪ್ರಜೆಗಳ ಮುಂದಿನ ಅಭಿವೃದ್ಧಿಯನ್ನು ಯೋಚಿಸುವುದಿಲ್ಲ. ಆದರೆ ಉಪಾಧ್ಯಾಯರು ಮಾತ್ರ ಜನಾಂಗದ ಮುಂದಿನ ಏಳಿಗೆಯ ಮೇಲೆ ದೃಷ್ಟಿಯಿಟ್ಟು ಕೆಲಸ ಮಾಡುತ್ತಾರೆ. ಯುಗಾಂತರಗಳಿಂದ ಉಪಾಧ್ಯಾಯರು ಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಉಪಾಧ್ಯಾಯರಿಲ್ಲದಿದ್ದರೆ ಜನಾಂಗವು ಕೆಳಗಿನ ಮೆಟ್ಟಿಲಿಂದಲೇ ಪ್ರತಿ ಸಲವೂ ಹತ್ತಲು ಪ್ರಯತ್ನಿಸಬೇಕಿತ್ತು. ಹೀಗೆ ಉಪಾಧ್ಯಾಯರಿಲ್ಲದಿದ್ದರೆ ಲೋಕವು ಇನ್ನೂ ಅನಾಗರಿಕತೆಯಲ್ಲಿ ಮುಳುಗಿರಬೇಕಿತ್ತು.

ಉಪಾಧ್ಯಾಯರ ಸಂಘದ ಸಮ್ಮೇಳನದ ಅಧ್ಯಕ್ಷರ ಭಾಷಣ.

ವಿದ್ಯಾರ್ಥಿಯರಲ್ಲಿ ರಾಷ್ಟ್ರಸೇವೆಯ ಭಾವನೆ ಹುಟ್ಟಿಸಿರಿ.
ಕೈನೂಲಿನ ಸ್ವದೇಶೀ ಬಟ್ಟೆಯನ್ನು ಪ್ರೋತ್ಸಾಹಿಸಿರಿ.
ಪ್ರತಿಯೊಂದು ಮನೆಯಲ್ಲೂ ಚರ್ಕಾ ಮತ್ತು ಮಗ್ಗಗಳಿರಬೇಕು.
ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಮಾಡತಕ್ಕದ್ದು.
ಓದುಬರಹ ತಿಳಿಯದವರು ದೇಶದಲ್ಲಿಲ್ಲದಂತಾಗಬೇಕು.
ಕೈಗಾರಿಕೆಗಳಿಂದಲೇ ದೇಶದ ಏಳಿಗೆಯಾಗುವದು.
ಸ್ವಾರ್ಥತ್ಯಾಗಿಗಳಾದ ಉಪಾಧ್ಯಾಯರು ಗ್ರಾಮಸ್ಥರಿಗೆ ಮಾದರಿ ಪುರುಷರಾಗಬೇಕು.

ಅಖಿಲ ಕೊಡಗು ಉಪಾಧ್ಯಾಯರ ಸಂಘದ ಚತುರ್ಥ ವಾರ್ಷಿಕ ಸಮ್ಮೇಳನ.

ಈ ಸಮ್ಮೇಳನವು ಡಿಶಂಬರ್ ತಾರೀಕು 3,4 ಮತ್ತು 5 ರಲ್ಲು ನಾಪೋಕ್ಲು ಮೋಡಲ್ ಶಾಲೆಯಲ್ಲಿ ಮೆ. ಎ. ರಾಮರಾವು, ಐ. ಇ. ಯಸ್ (ರಿಟಯರ್ಡ್) ರವರ ಅಧ್ಯಕ್ಷತೆಯಲ್ಲಿ ಬಹಳ ವಿಜ್ರಂಭಣೆಯಿಂದ ನಡೆಯಿತು. ಈ ಸಮ್ಮೇಳನಕ್ಕೆ ಅನೇಕ ಉದ್ಯೋಗಸ್ಥರೂ, ಡಿಸ್ಟ್ರಿಕ್ಟ್ ಬೋರ್ಡಿನ ಉಪಾಧ್ಯಕ್ಷರಾದ ಮೆ. ಪಾಂಡಂಡ ಚಿಂಗಪ್ಪನವರೂ, ಕೌನ್ಸಿಲು ಮೆಂಬರಾದ ಮೆ. ಗಳಾದ ಅಪ್ಪಾರಂಡ ಚಂಗಪ್ಪನವರೂ, ಬಲ್ಲಚಂಡ ಮತ್ತು ಬೆಳ್ಯಪ್ಪನವರೂ ಮೆ. ಅಪ್ಪಾರಂಡ ತಿಮ್ಮಯ್ಯನವರೂ, ಇನ್ನೂ ಅನೇಕ ದೇಶದ ಮಹಾಜನರೂ ಅತಿಥಿಗಳಾಗಿ ದಯಮಾಡಿಸಿದ್ದರು.

ಸಮ್ಮೇಳನದ ಮೊದಲನೆಯ ದಿವಸ ಕೊಡಗಿನ ಶಾಲೆಗಳ ಉಪಾಧ್ಯಾಯರ ಸಹಕಾರ ಸ್ಟೋರ್ ಮತ್ತು ಸಹಕಾರ ಸಂಘದ ವಾರ್ಷಿಕ ಅಧಿವೇಶನಗಳು ಜರುಗಿದವು. ಅವುಗಳಿಗೆ ಕ್ರಮವಾಗಿ ಮೆ. ಗಳಾದ ಅಪ್ಪಾರಂಡ ಚಂಗಪ್ಪ ಯಂ. ಎಲ್. ಸಿ. ಯವರೂ, ಪಾಂಡಂಡ ಚಂಗಪ್ಪ ಯಂ. ಎಲ್. ಸಿ. ಯವರೂ ಅಧ್ಯಕ್ಷರಾಗಿದ್ದರು. ಇವುಗಳ ಕಾರ್ಯಕ್ರಮವು ಎಂದಿನಂತೆ ಸುಸೂತ್ರವಾಗಿ ನಡೆದವು. ಅಧ್ಯಕ್ಷರ ಭಾಷಣಗಳು ಸ್ವಾರಸ್ಯವಾಗಿಯೂ ಅರ್ಥಗರ್ಭಿತವಾಗಿಯೂ ಇದ್ದವು.

ಮೂರನೆ ದಿವಸ ಪ್ರಾತಃಕಾಲ 8 ಗಂಟೆಯಿಂದ 12—30 ಗಂಟೆಯ ವರೆಗೆ ಆಟೋಟಗಳು ಶಾಲೆಯ ಮೈದಾನದಲ್ಲಿ ನಡೆದವು. ಇವುಗಳನ್ನು ನೋಕ್ಷಿಸುವುದಕ್ಕೆ ಸುಮಾರು 1500 ಕ್ಕೆ ಮಿಕ್ಕಿ ಜನರು ನೆರೆದಿದ್ದರು. ಅನೇಕ ಮಹಿಳೆಯರೂ ಸೇರಿದ್ದರು. ಆಟೋಟಗಳ ವಿಷಯಗಳಲ್ಲಿ ಅನೇಕ ಯುವಕರೂ, ಬಾಲಕ ಬಾಲಕಿಯರೂ ಭಾಗಿಗಳಾಗಿದ್ದರು

ಅನಂತರ ಮಧ್ಯಾಹ್ನದ ಮೇಲೆ 2 ಘಂಟೆಗೆ ಸಮ್ಮೇಳನದ ವಸ್ತು ಪ್ರದರ್ಶನವು ತೆರೆಯಲ್ಪಟ್ಟಿತು. ಮೊದಲು ನಿಶ್ಚಿಸಿದಂತೆ ರಾ. ಬಾ. ಕೆ. ಜಂಗಪ್ಪ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಇವರಿಗೆ ಬರಲಿಕ್ಕೆ ಅನಾನುಕೂಲವಾದದ್ದರಿಂದ ಸಮ್ಮೇಳನದ ಅಧ್ಯಕ್ಷರೇ ಇದನ್ನು ತೆರೆದರು. ತೆರೆಯುವ ಸಂದರ್ಭದಲ್ಲಿ ಅವರು ಹೀಗೆಂದರು:—

"ಶಾಲೆಗಳಲ್ಲಿ ಕೊಡುವ ವಿದ್ಯಾಭ್ಯಾಸದ ಉದ್ದೇಶವು ಮಕ್ಕಳಿಗೆ ಓದುವುದು, ಬರೆಯುವುದು ಮತ್ತು ಲೆಕ್ಕ ಮಾಡುವುದು ಮಾತ್ರವಲ್ಲ, ಅವರು ಮುಂದೆ ಉತ್ತಮ ತರದ ಜೀವನವನ್ನು ಮಾಡುವುದಕ್ಕೆ ತಯ್ಯಾರುಮಾಡುವುದಾಗಿದೆ. ಈ ತರದ ವಿದ್ಯಾಭ್ಯಾಸವು ಮಕ್ಕಳಿಗೆ ಒಡಗಿ ಕೆಲಸ, ಬಿತ್ತದ ಕೆಲಸ, ಹಗ್ಗ ಮಾಡುವುದು ಮೊದಲಾದ ಯಾವುದಾದರೊಂದು ಕೈಗಾರಿಕೆಯನ್ನು ಕಲಿಸುವುದಾಗಬೇಕು. ಹೀಗೆ ಮಾಡುವುದರಿಂದ ಅವರ ಕಣ್ಣು, ಕೈ, ಮತ್ತು ಮೆದುಳು ಎಲ್ಲಾ ಒಂದಾಗಿ ಸೇರಿ ಕೆಲಸ ಮಾಡುವುದಕ್ಕೆ ಕಲಿತುಕೊಳ್ಳುತ್ತಾರೆ. ಹೀಗೆ ಅವರು ತಮ್ಮ ಕೈಯನ್ನು ಜೆನ್ನಾಗಿ ಉಪಯೋಗಿಸಲಿಕ್ಕೆ ಕಲಿತುಕೊಂಡಮೇಲೆ ಅವರು ದೊಡ್ಡವರಾದ ಮೇಲೆ ಯಾವುದಾದರೊಂದು ರೀತಿಯಿಂದ ತಮ್ಮ ಜೀವನವನ್ನು ತಾವು ಸಂಪಾದಿಸಲಿಕ್ಕೆ ಸಾಧ್ಯವಾಗುತ್ತದೆ. ಈಗ ಕೊಡಗಿನ ಶಾಲೆಗಳಲ್ಲಿ 8000 ವಿದ್ಯಾರ್ಥಿಗಳು ಇದ್ದಾರೆಂದು ಕೇಳುತ್ತೇನೆ. ಆದರೆ ಅವರಿಗೆಲ್ಲಾ ಬೇಕಾದಷ್ಟು ನೌಕರಿಗಳು ಇವೆಯೇ? ಈಗ ತುದೆ ತಾಯಿಗಳಿಗೂ ಮತ್ತು ವಿದ್ಯಾರ್ಥಿಗಳಿಗೂ ಸರಕಾರಿ ನೌಕರಿಗಳನ್ನು ಸಂಪಾದಿಸುವುದೇ ವಿದ್ಯಾಭ್ಯಾಸದ ಗುರಿಯೆಂದು ಅಭಿಪ್ರಾಯವಿದೆ. ಆದರೆ ಈಗ ಹೆಚ್ಚು ವಿದ್ಯಾಭ್ಯಾಸವನ್ನು ಪಡೆದರೂ ಒಬ್ಬ ಗುಮಾಸ್ತನ ಕೆಲಸವಾಗಲೀ, ಜವಾನನ ಕೆಲಸವಾಗಲೀ ಪಡೆಯುವುದು ಕಷ್ಟವಾಗಿದೆ. ಆದ್ದರಿಂದ ನಾವು ಈಗ ಕೊಡಬೇಕಾದ ವಿದ್ಯೆಯು, ವಿದ್ಯಾರ್ಥಿಯನ್ನು ತನ್ನ ತಂದೆ ತಾಯಿಗಳ ಕಸಬಿನಲ್ಲಿ ಹೆಚ್ಚಿನ ನೈಪುಣ್ಯವನ್ನು ಕೊಡುವಂಥಾದ್ದಾಗಿರಬೇಕು. ವಿದ್ಯಾರ್ಥಿಯು ಗ್ರಾಮವಾಸಿಯಾಗಿದ್ದರೆ ಈ ವಿದ್ಯಾಭ್ಯಾಸದಿಂದ ಈಗಿನದಕ್ಕಿಂತ ಉತ್ತಮಜೀವನವನ್ನು ನಡೆಸುವುದಕ್ಕೆ ತಯ್ಯಾರುಮಾಡುವಂಥಾದ್ದಾಗಿರಬೇಕು. ಒಂದು ದೇಶದ ಪ್ರಾಮುಖ್ಯತೆಯು ಅದರ ವ್ಯಾಪಾರದ ಮತ್ತು ಕೈಗಾರಿಕೆಯ ಮೇಲೆ ಹೊಂದಿದೆ. ಇಂಗ್ಲೆಂಡು ದೇಶವು ಲೋಕದಲ್ಲೆಲ್ಲಾ ಈಗ ಮೊದಲನೆಯ ಸ್ಥಾನವನ್ನು ಹೊಂದಿ. 6000 ಮೈಲು ದೂರದಿಂದ ಬಂದು ಹಿಂದೂದೇಶವನ್ನು ಆಳುತ್ತಿರುವುದು ಕೈಗಾರಿಕೆ ಮತ್ತು ವ್ಯಾಪಾರದಲ್ಲಿ ಮುಂದೆ ಬಂದಿರುವುದರಿಂದ ಆಗಿದೆ. ಅದು ಹಿಂದೂಸ್ಥಾನವನ್ನು ಇಟ್ಟುಕೊಳ್ಳುವುದಕ್ಕೆ ಇಷ್ಟಪಡುವುದು ಸಹ ಅದರ ಕೈಗಾರಿಕೆ ಸಾಮಾನಗಳನ್ನು ಮಾರಾಟ ಮಾಡುವ ಉದ್ದೇಶದಿಂದಾಗಿದೆ. ಆದುದರಿಂದ ಕೈಗಾರಿಕೆಗಳ ಪ್ರಾಮುಖ್ಯತೆಯನ್ನು ಮಕ್ಕಳ ತಂದೆ ತಾಯಿಗಳೂ ಮತ್ತು ಉಪಾಧ್ಯಾಯರೂ ತಿಳಿದುಕೊಳ್ಳಬೇಕು. ಅವರು ಬಾಲಕ ಬಾಲಕಿಯರಲ್ಲಿ ಕೈಗಾರಿಕೆಗಳ ಮೇಲೆ ಅಭಿರುಚಿಯನ್ನು ಹುಟ್ಟಿಸಿದರೆ ಕೊಡಗು ಬೇಗನೆ ಕೈಗಾರಿಕೆ ಮತ್ತು ವ್ಯಾಪಾರದ ದೇಶವಾಗುವುದು ಎಂದು ನನಗೆ ಭರವಸೆ ಇದೆ. ನೀವೀಗ ಪ್ರದರ್ಶನ ವಸ್ತುಗಳನ್ನು ನೋಡಿ ಸಂತೋಷಪಟ್ಟರೆ ಮಾತ್ರ ಸಾಲದು. ನೀವು ಹಿಂದಕ್ಕೆ ಹೋಗುವಾಗ ಈ ತರದ ವಸ್ತುಗಳನ್ನು ನಿಮ್ಮ ಮನೆಗಳಲ್ಲೂ, ಶಾಲೆಗಳಲ್ಲೂ ಕಲಿಸುವುದಕ್ಕೆ ಯತ್ನಿಸಬೇಕು. ಈ ಮಾತುಗಳಿಂದ ನಾನು ಪ್ರದರ್ಶನವನ್ನು ತೆರೆಯುತ್ತೇನೆ" ಎಂದು ಹೇಳಿ ವಸ್ತು ಪ್ರದರ್ಶನವನ್ನು ತೆರೆದರು ಅನಂತರ ಪ್ರದರ್ಶನದಲ್ಲಿದ್ದ ವಸ್ತುಗಳನ್ನು ಅವರೂ, ಮಿಸೆಸ್ ಬಿ. ಯಸ್. ಕುಶಾಲಪ್ಪನವರು ಮತ್ತು ಮಿಸೆಸ್ ಪಿ. ಸಿ. ಉತ್ತಯ್ಯನವರು ಪರೀಕ್ಷಿಸಿ ಉತ್ತಮವಾದ ವಸ್ತುಗಳಿಗೆ ಬಹುಮಾನಗಳನ್ನು ನಿಶ್ಚಯಿಸಿದರು

ಇದಾದ ನಂತರ ಸಮ್ಮೇಳನವು ಮೆ ಎ. ರಾಮರಾಯರಿಂದ ತೆರೆಯಲ್ಪಟ್ಟಿತ. ಪ್ರಾರಂಭದಲ್ಲಿ ಸ್ವಾಗತ ಮಂಡಳಿಯ ಅಧ್ಯಕ್ಷರಾದ ಮೆ. ಕೆ. ಯಸ್. ನಂಜುಂಡನವರು ತಮ್ಮ ಭಾಷಣದಲ್ಲಿ ತಮ್ಮ ನಾಡಿನ ಪರವಾಗಿ ಅಧ್ಯಕ್ಷರಿಗೂ, ನೆರೆದಿದ್ದ ಮಹಿಳೆ ಮಹನೀಯರಿಗೂ ಸ್ವಾಗತವನ್ನಿತ್ತು, ತಮ್ಮ ನಾಡಿನ ಕೊರತೆಗಳನ್ನು ವರ್ಣಿಸಿದರು ಅನಂತರ ಆಟೋಟಗಳಲ್ಲಿಯೂ, ಪ್ರದರ್ಶನದಲ್ಲಿಯೂ ಬಹುಮಾನಗಳನ್ನು ಹೊಂದಿದವರಿಗೆ ಮಿಸೆಸ್. ಬಿ. ಯಸ್. ಕುಶಾಲಪ್ಪನವರು ಬಹುಮಾನಗಳನ್ನು ಹಂಚಿದರು. ಇದಾದ ಮೇಲೆ ಅಧ್ಯಕ್ಷರು ತಮ್ಮ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಈ ಭಾಷಣವು ಇನ್ನೊಂದು ಕಡೆ ಪ್ರಕಟಿಸಲಾಗಿದೆ.

ಆ ಮೇಲೆ ಉಪಾಧ್ಯಾಯರ ಸಂಘದ ಬಿಸ್‌ನೆಸ್ ಮೀಟಿಂಗು ನಡೆಯಿತು. ರಾತ್ರಿ 9ರಿಂದ 12 ಗಂಟೆ ವರೆಗೆ 'ಟಂಡರ್ ಬಾಕ್ಸ್' ಮತ್ತು 'ವೀರರಾಜವಿಜಯ'ವೆಂಬ ನಾಟಕವನ್ನು ವೀರರಾಜಪೇಟೆ ಹೈಸ್ಕೂಲಿನ ವಿದ್ಯಾರ್ಥಿಗಳು ಅಭಿನಯಿಸಿದರು.

ಮೂರನೆ ದಿನ ಬೆಳಿಗ್ಗೆ ಮೆ. ಬಿ. ಯಸ್. ಕುಶಾಲಪ್ಪನವರು ಭೂಗೋಳ ಪಾಠವನ್ನೂ ಮೆ ಕೆ. ಪಿ ಮುತ್ತಣ್ಣನವರು ಇಂಗ್ಲಿಷ್ ಪದ್ಯಪಾಠವನ್ನೂ ಮಾಡಿದರು. ಇದಾದ ಮೇಲೆ ಶಾಲೆಗಳಲ್ಲಿ ಮತ ಸಂಬಂಧದ ಶಿಕ್ಷಣ ಕೊಡಬೇಕೋ ಬೇಡವೋ ಎಂಬ ವಿಷಯವನ್ನು ಚರ್ಚಿಸಿದರು.

ಮಧ್ಯಾಹ್ನದ ಮೇಲೆ ಕೊಡಗು—ಬೆಂಗಳೂರಿನ ಶಾಲಾ ಇನ್‌ಸ್ಪೆಕ್ಟರು 'ಬೋಧನಾಕ್ರಮದಲ್ಲಿ ಅಧುನಿಕ ಬದಲಾವಣೆಯ ವಿಷಯವನ್ನೂ, ಮೈಸೂರಿನ ಮಹಾರಾಜ ಕಾಲೇಜಿನ ಲೆಕ್ಚರರಾದ ಮೆ. ನಾರಾಯಣ ಶಾಸ್ತ್ರಿಯವರು ಸಾಹಿತ್ಯ ಸಲಕರಣೆಗಳಿಂದ 'ಮಕ್ಕಳ ಶಿಕ್ಷಣ'ವನ್ನೂ, ವೀರರಾಜಪೇಟೆ ಹೈಸ್ಕೂಲಿನ ಮುಖ್ಯೋಪಧ್ಯಾಯರಾದ ಮೆ. ಪಿ. ಸಿ. ಉತ್ತಯ್ಯನವರು 'ಪ್ರಪಂಚ ಕ್ರಾಂತಿಯೂ, ಉಪಾಧ್ಯಾಯರ ಕರ್ತವ್ಯ'ವೆಂಬ ವಿಷಯವನ್ನೂ ಕುರಿತು ಭಾಷಣ ಮಾಡಿದರು. ನಂತರ ಶಂಭವಾನಂದ ಸ್ವಾಮಿಯವರು ಮಲೇರಿಯಾದ ವಿಷಯು ಕೊಡಗು ಭಾಷೆಯಲ್ಲಿ ಹಾಡುಗಳನ್ನು ಕಿವಿಗಿಂಪಾಗುವಂತೆ ಹಾಡಿದರು. ಅಧ್ಯಕ್ಷರು ಮೂರು ದಿನಗಳಲ್ಲಿ ನಡೆದ ಕಾರ್ಯಕಲಾಪಗಳನ್ನು ವಿವರಿಸಿ ಮಾತಾಡಿದರು. ಕಡೆಯಲ್ಲಿ ಸಂಘದ ಅಧ್ಯಕ್ಷರಾದ ಪಿ. ಯಂ. ಉತ್ತಪ್ಪನವರು ಅಧ್ಯಕ್ಷರಿಗೂ, ಭಾಷಣ ಕರ್ತರುಗಳಿಗೂ, ಪಾಠ ಹೇಳಿದವರಿಗೂ, ಇತರರೆಲ್ಲರಿಗೂ ವಂದನೆಯನ್ನು ಅರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

ಹಲವು ವಿಷಯಗಳನ್ನು ಪುನಹ ಬಿಸ್‌ನೆಸ್ ಮೀಟಿಂಗಿನಲ್ಲಿ ಚರ್ಚಿಸಿ ಮುಂದಿನ ವರ್ಷಕ್ಕಿರುವ ಉದ್ಯೋಗಸ್ಥರನ್ನು ಚುನಾಯಿಸಿದರು. ಮೆ. ಡಿ. ಯಂ. ತಿಮ್ಮಿಂಗಯ್ಯನವರು ಸಂಘದ ಅಧ್ಯಕ್ಷರಾಗಿಯೂ, ಮೆ. ನಡಿಕೇರಿಯಂಡ ಸುಬ್ಬಯ್ಯನವರು ಕಾರ್ಯದರ್ಶಿಯಾಗಿಯೂ, ಮೆ. ಗುಮ್ಮಟ್ಟಿರ ನಂಜಪ್ಪನವರು ಕ್ಯಾಪ್ಟನರಾಗಿಯೂ, ಮೆ. ಟಿ. ಯಂ. ಕಾರ್ಯಪ್ಪನವರು 'ಶಾರದಾ' ಪತ್ರಿಕೆಯ ಸಂಪಾದಕರಾಗಿಯೂ ಚುನಾಯಿಸಲ್ಪಟ್ಟರು. ಮುಂದಿನ ವರ್ಷದ ಕಾನ್‌ಫರೆನ್ಸನ್ನು ವೊನ್ನಂಪೇಟೆಯಲ್ಲಿ ನಡಿಸಬೇಕೆಂದೂ, ಆ ಸಮಯದಲ್ಲಿ ಊಟದ ಏರ್ಪಾಡನ್ನು ಮುಪ್ಪತ್ತಾಗಿ ತಾನು ನಡಿಸುತ್ತೇನೆಂದು ಪತ್ರ ಮೂಲಕ ಮೆ. ಸಿ ಎಸ್. ಪೂವಯ್ಯನವರು ಕೇಳಿಕೊಂಡದ್ದರಿಂದ ಅವರಿಗೆ ವಂದನಾರ್ಪಕ ಅಂತೆಯೇ ನಡಿಸುವುದೆಂದೂ ತೀರ್ಮಾನವಾಯಿತು.

ವೀರಾಜಪೇಟೆ,
ತಾ. 6—12—1932.

ಡಿ. ಎನ್. ಕೃಷ್ಣಯ್ಯ,
(ಗೌರವ ಕಾರ್ಯದರ್ಶಿ.)

ಕಾಕೋಟುಪರಂಬು ಹೈಯರ್ ಎಲಿವೆಂಟರಿ ಶಾಲಾ 'ಸ್ಕೂಲ್ ಡೇ.'

(ಬಬ್ಬ ಉಪಾಧ್ಯಾಯರಿಂದ)

ನವಂಬರ್ ತಾರೀಕು 27ನೇಯ ಆದಿತ್ಯವಾರ ಪ್ರಾತಃಕಾಲ 8½ ಗಂಟೆಗೆ ಶಾಲೆಯ ಬಾಲಕರೆಲ್ಲರೂ ಶಾಲಾ ಆವರಣದಲ್ಲಿ ಪ್ರಾರ್ಥನೆ ಮಾಡಿ, ಉಪಾಧ್ಯಾಯರೊಡಗೂಡಿ, ವಾದ್ಯ ಘೋಷದೊಡನೆ ಆಟದ ಮೈದಾನಕ್ಕೆ ಹೋದರು. ಅಲ್ಲಿ ಸಾಧಾರಣ ಒಂದು ಗಂಟೆ ಅಪರಾಹ್ನದ ವರೆಗೆ ಬಾಲಕ ಬಾಲಕಿಯರ ಆಟಪಾಟಗಳೂ, ಪಬ್ಲಿಕಿನವರ ಸೈಕಲ್‌ರೇಸ್, ವೈಲ್ ರೇಸ್, ಎತ್ತರ ಮತ್ತು ದೂರ ಹಾರುವದು ಮತ್ತು ತೆಂಗಿನ ಕಾಯಿಗೆ ಗುಂಡು ಹೊಡೆಯುವುದು ನಡೆಯಿಸಲಾಯಿತು. ಒಂದುವರೆ ಗಂಟೆ ಅಪರಾಹ್ನಕ್ಕೆ ನೆರೆದಿದ್ದ ಸಾಧಾರಣ 2000 ಮಹಿಳೆಯರಿಗೂ, ಮಹನೀಯರಿಗೂ ಊಟೋಪಚಾರ ನಡೆಸಿ ಮೂರು ಘಂಟೆಗೆ ಹೆಡ್ಮಾಸ್ಟರವರ ಕೋರಿಕೆ ಮೇರೆ ಡಿಸ್ಟ್ರಿಕ್ಟ್ ಬೋರ್ಡ್ ವೈಸ್ ಪ್ರೆಸಿಡೆಂಟರೂ ಮತ್ತು ಕೌನ್ಸಿಲ್ ಮೆಂಬರರೂ ಆದ ಮೆ. ಪಾಂಡಂಡ ಚಂಗಪ್ಪನವರು ಚಿಕ್ಕ ಭಾಷಣ ಮಾಡಿ, ವಿದ್ಯಾರ್ಥಿಗಳ ಕೈಗಾರಿಕೆಯ, ಬರವಣಿಗೆಯ, ಚಿತ್ರ ಲೇಖನದ, ಸಿಯಿಗೆ, ಮಣಿ, ಮಣ್ಣು ಕೆಲಸದ ಪ್ರದರ್ಶನ ತೆರೆದರು. ಆ ಮೇಲೆ ಹುಡುಗಿಯರ ಶಾಲೆಯ ಬಾಲಕಿಯರ ಪ್ರಾರ್ಥನೆಯಾದನಂತರ ಕೌನ್ಸಿಲ್ ಮೆಂಬರಾದ ಮೆ. ಅಪ್ಪಾರಂಡ ಚಂಗಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದರು. ಶಾಲಾ ಹೆಡ್ಮಾಸ್ಟರ್ ಮೆ. ಯಸ್. ಯಸ್. ಗಂಗಾಧರವರು ಶಾಲೆಯ ದೀರ್ಘವಾದ ವಂದಿಯನ್ನೂ, ವಿದ್ಯಾರ್ಥಿ ಸಮ್ಮಾರ್ಗ ಸಂಘದ ಸೆಕ್ರೆಟರಿಯವರು ಸಂಘದ ವರದಿಯನ್ನೂ ಓದಿದನಂತರ ವಿದ್ಯಾರ್ಥಿಗಳಿಗೂ, ಪಬ್ಲಿಕಿನವರಿಗೂ, ಸಾಧಾರಣ ಒಂದುನೂರು ರೂಪಾಯಿ ಬೆಲೆಯ ಅನೇಕ ಇನಾಮುಗಳನ್ನು ಅಧ್ಯಕ್ಷರು ಹಂಚಿದರು. ಮುಗಿಲು ಮುಚ್ಚಿದ್ದು ಮಳೆಯ ಹೆದರಿಕೆ ಉಂಟಾದುದರಿಂದ ಪ್ರದರ್ಶನದ ಭಾಗಕ್ಕೆ ಇನಾಮು ಹಂಚುವುದನ್ನು ಬಾಕಿ ಮಾಡಲಾಯಿತು. ಅಧ್ಯಕ್ಷರು ಬೆಪ್ಪುನಾಡು ಕೋ-ಆಪರೇಟಿವ್ ಸಂಘದ ಸ್ಕಾಲರ್‌ಶಿಪ್ಪನ್ನು ಅರು ಹುಡುಗರಿಗೆ ಹಂಚಿದ ಮೇಲೆ ಕೊಡಗು ಮಾತಿನಲ್ಲಿ ಹತ್ತು ನಿಮಿಷಗಳ ಕಾಲ ನಾಡಿನ ಜನರಿಗೂ, ಬಾಲಕ ಬಾಲಕಿಯರಿಗೂ ಬೋಧಪ್ರದವಾದ ಭಾಷಣ ಮಾಡಿದರು. ಆ ಮೇಲೆ ವಿದ್ಯಾರ್ಥಿಗಳು ಶಿವಾಜಿಯ ಜೀವನ ಚರಿತ್ರೆಯ ಒಂದು ಭಾಗದ ಕಥೆಯನ್ನು ಇಂಗ್ಲಿಷಿನಲ್ಲಿಯೂ, 'ಭಾರ್ಗವ ಗರ್ವಭಂಗ' ಎಂಬುವುದನ್ನು ಕನ್ನಡದಲ್ಲಿಯೂ ಅಭಿನಯಿಸಿದರು. ಅಂತ್ಯದಲ್ಲಿ ಹೆಡ್ಮಾಸ್ಟರವರು ನೆರೆದಿದ್ದ ಮಹಿಳೆಯರಿಗೂ, ಮಹನೀಯರಿಗೂ, ಅಧ್ಯಕ್ಷರಿಗೂ ವಂದಿಸಿದನಂತರ ಅಧ್ಯಕ್ಷರ ಮುಕ್ತಾಯ ಭಾಷಣದೊಡನೆ ಸ್ಕೂಲ್ ಡೇ ಉತ್ಸವವು ರಾತ್ರಿ 8.15 ಗಂಟೆಗೆ ಅತ್ಯವಾಯಿತು

(ಮೇಲಿನ ಕಾರ್ಯಭಾಗದಲ್ಲಿ ಚಂದಾ ಮೂಲಕವೂ, ಇನಾಮುಗಳ ಮೂಲಕವೂ, ತಮ್ಮುನ ಸಹಾಯದ ಮೂಲಕವೂ ಶಾಲಾ ಉಪಾಧ್ಯಾಯರುಗಳಿಗೆ ನೆರವಾದ ಮಹಿಳೆಯರಿಗೂ, ಮಹನೀಯರಿಗೂ ಶಾಲೆಯ ಹೃತ್ಪೂರ್ವಕವಾದ ವಂದನೆಗಳಿವೆ.)

ಚೈಯಂಡಾಣೆ ಶಾಲೆಯ ನಾಲ್ಕನೇ ವಾರ್ಷಿಕೋತ್ಸವವು.

(ಹಾಜರಿದ್ದವರಿಂದ.)

ಕಳೆದ ನವಂಬರ್ ತಾ. 27ನೇ ಆದಿತ್ಯವಾರ ಚೈಯಂಡಾಣೆ ಶಾಲೆಯ ನಾಲ್ಕನೇ ವಾರ್ಷಿಕೋತ್ಸವವು ಮೆ. ಬಿ. ಎ. ಬೆಳ್ಯಪ್ಪ ಯಂ. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾರ್ಯಕ್ರಮ ಪಟ್ಟಿಯಲ್ಲಿ ತೋರಿಸಿದಂತೆ 8½ ಗಂಟೆಗೆ ಶಾರದಾ ಪೂಜೆಯಾಗಿ ತೀರ್ಥ ಪ್ರಸಾದವನ್ನು ಸ್ವೀಕರಿಸಿದ ನಂತರ ಶಾಲೆಯು ಹೊಂಬನಿಯಲ್ಲಿರುವ ಶಾಲಾ ವೈಮೈದಾನಕ್ಕೆ ತೆರಳಿ ಓಟಕ್ಕೆ ಪ್ರಾರಂಭವಾಗುವಷ್ಟರಲ್ಲಿ ಅಧ್ಯಕ್ಷರು ಬಂದದ್ದರಿಂದ, ಶಾಲಾ ಹೆಡ ಮಾಸ್ಟರು ಇನ್ನು ಕೆಲವು ಮಹನೀಯರು ವಾದ್ಯದೊಡನೆ ಶಾಲೆಗೆ ಕರತಂದು ತೀರ್ಥ ಪ್ರಸಾದವನ್ನು ಕೊಡಿಸಿ ವೈದಾನಕ್ಕೆ ಕರತಂದರು. ಈ ವರ್ಷ ಆಟ ಓಟಗಳಿಗೆ ಬಹಳ ದೂರದಿಂದ ಅನೇಕ ಮಹನೀಯರು ಬಂದು ಇನಾಮುಗಳನ್ನು ಪಡಕೊಂಡದ್ದಲ್ಲದೆ ವೃದ್ಧರಿಗೂ ಸಹ ಓಟವನ್ನಿಟ್ಟದ್ದು ವಿಶೇಷವಾಗಿದೆ. ಇದು ತೀರಿದ ನಂತರ ಸೇರಿದ ಎಲ್ಲಾ ಜನರಿಗೂ ಊಟ ಉಪಚಾರಗಳಾದವು.

ಅನಂತರ 1½ ಗಂಟೆಗೆ ಶಾಲೆಯು ಅಂಗಳದಲ್ಲಿ ಹಾಕಿದ್ದ ಚಪ್ಪರದಲ್ಲಿ ಸಭೆ ನೆರೆಯಿತು. ಬಾಲಕಿಯರಿಂದ ಪ್ರಾರ್ಥನೆಯಾದನಂತರ ಶಾಲಾ ಹೆಡ್‌ಮಾಸ್ಟರು ಶಾಲಾ ವರದಿಯನ್ನು, ಬಾಲ ಸನ್ಯಾಜದ ಸೆಕ್ರೆಟರಿಯವರು ಅವರ ವರದಿಯನ್ನೂ ಓದಿದರು. ಶಾಲೆಯು ಅಭಿವೃದ್ಧಿಯೂ, ಬಾಲಕರು ಚರ್ಚಿಸಿ ತೀರ್ಮಾನಿಸಿಕೊಂಡ ವಿಷಯವೂ ಅತಿ ಸಂತೋಷವನ್ನುಂಟುಮಾಡತಕ್ಕದ್ದಾಗಿದೆ.

ಅನಂತರ ಬಾಲಕರು 'ಶನಿ ಪ್ರಭಾವ'ವೆಂಬ ಕಥೆಯನ್ನೂ, ಬಾಲಕೀಯರು 'ನವೀನ ಭರತಖಂಡ'ವೆಂಬ ಸ್ತ್ರೀ ಸನ್ಯಾಜದಲ್ಲಿ ರತಕ್ಕ ಗುಣಗಳನ್ನೂ ಅಭಿನಯಿಸಿ ತೋರಿಸಿದರು. ಆ ಮೇಲೆ ಮೆ. ಎನ್. ಸಿ. ಸುಬ್ಬಯ್ಯನವರು ಉಪಾಧ್ಯಾಯರಿಗೂ—ಪೋಷಣಾಕರ್ತರಿಗೂ, ಬಾಲಕರಿಗೂ—ಪೋಷಣಾಕರ್ತರಿಗೂ ಇರತಕ್ಕ ಸಂಬಂಧದ ಕುರಿತೂ, ಮೆ. ಬಿ. ಬಿ. ಮುದ್ದಯ್ಯನವರು ಮಕ್ಕಳ ಆಹಾರದ ವಿಷಯವಾಗಿಯೂ, ಮೆ. ತೋಟಂಬೈಲು ಅಪ್ಪಣ್ಣನವರು ಯೂನಿರುನ್ನಿನ ಪುವಾಗಿ ಮಾತಾಡತ್ತಾ ಹುಯರ್ ಎಲಿವೆಂಟರಿ ಶಾಲೆಯಾಗುವುದಕ್ಕೆ ಪ್ರೋತ್ಸಾಹಿಸುತ್ತಿರುವುದನ್ನು ಕುರಿತೂ, ಮೆ. ಉಪಾಯಂಡ ಮಾಚಯ್ಯನವರು ಬಾಲಕ ಬಾಲಕಿಯರುಗೆ ಮಾತೃದೇವೋಭವ ವಿಷಯವಾಗಿ ವಿಷಯಂಬಿಸಿ ಈ ದಿನ ತುಂಬಾ ಮಹಿಳೆಯರು ನೆರೆದಿರುವುದು ಸಂತೋಷವೆಂದೂ ಭಾಷಣ ಮಾಡಿದರು. ಅನಂತರ ಇನಾಮುಗಳನ್ನು ಹಾಜಿ, ಅಧ್ಯಕ್ಷರು ಸ್ವಾರಸ್ಯವಾದ ಭಾಷಣ ಮಾಡಿದರು. ಆ ಮೇಲೆ ಹೆಡ್‌ಮಾಸ್ಟರು ಎಲ್ಲರಿಗೂ ವಂದನೆಯನ್ನರ್ಪಿಸಿ 5 ಗಂಟೆಗೆ ಸಭೆ ಬರಕಾಸ್ತು ಮಾಡಲಾಯಿತು.

ಪುನಃ ಎಲ್ಲರೂ ರಾತ್ರಿ 8 ಗಂಟೆಗೆ ಬಂದನಂತರ ಮೆ. ಅಪ್ಪನೆರವಂಡ ಅಪ್ಪಚ್ಚು ಹುದವಾಸುವರು ಮೂಕಾಂಡೇಯ ಚರಿತ್ರೆಯನ್ನು ಭಕ್ತಿ ಸನ್ಮಾರ್ಗದಿಂದ ಕೂಡಿ ರಸಭರಿತವಾಗಿ ಮಾಡಿದ ಹರಿಕಥೆಯನ್ನು ಕೇಳಿ ಸಂತೋಷದಿಂದ ತೆರಳಿದರು.

ಆ ದಿನಕ್ಕೆ ಮುಂಚೆ ಇಪ್ಪತ್ತು ಮಳೆಯನ್ನು ನೋಡಿ ಭೀತಿಗೊಂಡಿದ್ದರೂ ಆ ದಿನ ಮಳೆ ಇಲ್ಲದೆ ದೇವರ ಕೃಪೆಯಿಂದ ಉತ್ಸವವು ಬಹಳ ಚೆನ್ನಾಗಿ ನಡೆಯಿತು.

ಜವಾನ್ದಾರರ ಸಂಘದ ಕಮಿಟಿ ಮೀಟಿಂಗು.

ತಾ. 3—12—32 ರಲ್ಲಿ ವೀರರಾಜಪೇಟೆಯಲ್ಲಿ ಕೊಡಗು ಜವಾನ್‌ದಾರರ ಸಂಘದ ಕಮಿಟಿ ಮೀಟಿಂಗು ನಡೆಯಿತು. ಈ ಕೆಳಗಿನವರು ಹಾಜರಿದ್ದರು. ಮೆ. ರಾ. ಶ್ರೀ. ಗ

ಐ. ಸಿ. ಸುಬ್ಬಯ್ಯನವರು, ಮನೆಯಪಂಡ ಚಿಣ್ಣಪ್ಪನವರು. ಜಿ. ಯಂ. ಮಂಜುನಾಥ್ಯಯ್ಯನವರು, ಯನ್. ಸಂಜೀವಯ್ಯನವರು, ಬಿದರೂರು ಮೊದ್ದಯ್ಯನವರು, ತಿಂಗೂರು ಮೂದಪ್ಪನವರು, ಯನ್. ಶಂಕರಿಗೌಡ [illegible] ಕಾಳಪ್ಪನವರು, ಯಂ. ಯಂ. ಸಿ[illegible] ಕಡ ಆನಂದಯ್ಯನವರು, ಮುಕ್ಕಾಟಿರ ಕರುಂಬಯ್ಯನವರು, ಹೆಮ್ಮನೆ ಮುತ್ತಂಜಯ್ಯನವರು, ಅಂಜಪರವಂಡ ತಿಮ್ಮಯ್ಯನವರು, ಮತ್ತು ಮೊದಲನೇ ತರಾವು ತೀರ್ಮಾನವಾದ ನಂತರ ಬಂದ ಮೆ. ಬಿದ್ದಂಡ ಸುಬ್ಬಯ್ಯನವರು.

ನೋಟೀಸಿನಲ್ಲಿ ನಮೂದಿಸಿದ್ದ ಈ ಕೆಳಗಿನ ತರಾವನ್ನು ಮೆ. ಐ. ಸಿ. ಸುಬ್ಬಯ್ಯನವರು ಸಭೆಯ ಮುಂದೆ ಇಟ್ಟರು. "ಕೊಡಗಿನ ಸರಕಾರಕ್ಕೆ ಇಂಡಿಯಾ ಸರಕಾರವು ಹಿಂದಿನ ಸಾಲ್ಕಿನ ಕೆಲವು ಭಾಗವನ್ನಾದರೂ ಕೊಟ್ಟು ಇನ್ನು ಮುಂದೆ ಸಾಲಿಯೂನ ಐದು ಲಕ್ಷ ರೂಪಾಯಿ (ಸಬ್ವೆನ್ಶನ್) ಕೊಡಲು ಒಪ್ಪಿ ಕೊಡಗಿಗೆ ಸಂಪೂರ್ಣ ಸ್ವಜಾತಜವಾಬ್ದಾರಿ ಸರಕಾರವನ್ನು ಮಂಜೂರುಮಾಡಿಕೊಡಬೇಕು. ಹೀಗೆ ಮಾಡಲು ಸಾಧ್ಯವಿಲ್ಲವೆಂತ ಸಂಬಂಧಪಟ್ಟ ಅಧಿಕಾರಿಗಳಿಗೆ ತೋರಿದರೆ ಕೊಡಗಿನ ಜನರಿಗೆ ಇರುವ ಕೋವಿ ಕತ್ತಿ, ಜಮ್ಮ ಮತ್ತು ಇತರ ಹಕ್ಕುಗಳನ್ನು ಭದ್ರಪಡಿಸಿಕೊಂಡು ಪ್ರತ್ಯೇಕ ಜಿಲ್ಲೆಯಾಗಿಯೇ ಇಟ್ಟು ಕೊಳ್ಳುವ ಶರತ್ತಿನಿಂದ ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕು."

ಮೆ. ಯಂ. ಯಂ. ಸಿದ್ದೀಕರು ಅನುವೋದಿಸಿದರು. ಮೆ. ಚೌಡ್ಲು ಕಾಳಪ್ಪನವರು ಪುಷ್ಟೀಕರಿಸಿದರು.

ಮ. ರಾ. ಶ್ರೀ ಮುಕ್ಕಾಟ್ಟಿರ ಕರುಂಬಯ್ಯನವರು ತತ್ಕಾಲಕ್ಕೆ ಈ ತರಾವನ್ನು ಬಾಕಿ ಇಟ್ಟು ಹಿಂದಿನಿಂದ ಕಾಂಗ್ರೆಸಿನವರ ಸಹಕಾರ ಸಹ ಪಡೆದು ಒಗ್ಗಟ್ಟಾಗಿ ತೀರ್ಮಾನಿಸುವುದು ಉತ್ತಮವೆಂತ ಸೂಚಿಸಿದರು. ದೇಶಕ್ಕೆ ಅನುಕೂಲಗಳನ್ನು ಪಡೆಯಲು ಬೇರೆ ದೇಶದೊಂದಿಗೆ ಸೇರಬೇಕಾಗಬಹುದು. ಆದರೆ ಈಗ ಈ ತೀರ್ಮಾನ ಮಾಡುವುದು ಬೇಡವೆಂತ ಸೂಚಿಸಿದರು.

ಮ. ರಾ. ಶ್ರೀ. ಬಿದರೂರು ಮೊದ್ದಯ್ಯನವರು ಕಾಂಗ್ರೆಸಿನ ಹೋರಾಟದಿಂದ ಜಯವಾಗುವುದಿಲ್ಲವೆಂತ ಹೇಳಕೂಡದು. ಜಯವಾಗುತ್ತದೆಯೆಂತ ಭರವಸೆ ಇಟ್ಟು ಕೆಲಸ ಮಾಡಬೇಕು. ಹೀಗೆ ಬೇರೆಯೇ ಇರಲು ಸಾಧ್ಯವಿಲ್ಲವೆಂತಾದರೆ ಮೈಸೂರಿಗೆ ಸೇರಬಹುದು ಎಂತ ಹೇಳಿದರು.

ಮೆ. ರಾ. ಶ್ರೀ. ಜೆ. ಯಂ. ಮಂಜುನಾಥ್ಯಯ್ಯನವರು ತರಾವಿನ ಪರವಾಗಿ ಮಾತಾಡಿದ ನಂತರ ಮೆ. ಐ. ಸಿ. ಸುಬ್ಬಯ್ಯನವರು ಜವಾಬುಕೊಟ್ಟರು.

ಮೆ. ಗಳಾದ ಮುಕ್ಕಾಟಿರ ಕರುಂಬಯ್ಯನವರು ಮತ್ತು ಬಿದರೂರು ಮೊದ್ದಯ್ಯನವರು ನ್ಯೂಟ್ರಲ್ ಆಗಿದ್ದರು. ಇತರ ಸರ್ವರ ಒಪ್ಪಿಗೆಯಿಂದ ತರಾವು ಮಂಜೂರಾಯಿತು.

ತೀಘ್ರದಲ್ಲೇ ಆಗಲಿಕ್ಕಿರುವ ಸರ್ವ ಪಕ್ಷ ಪರಿಷತ್ತಿಗೆ ಸಂಘದ ಪರವಾಗಿ ಈ ಕೆಳಗಿನ ಮಹನೀಯರು ಪ್ರತಿನಿಧಿಗಳಾಗಿ ಹೋಗಬೇಕೆಂತ ತೀರ್ಮಾನವಾಯಿತು.

ಮೆ. ಗಳಾದ ಐ. ಸಿ. ಸುಬ್ಬಯ್ಯನವರು, ಯಂ. ಯಂ. ಚಿಣ್ಣಪ್ಪನವರು, ಅಂಜಪರವಂಡ ತಿಮ್ಮಯ್ಯನವರು, ಬಿಟ್ಟೋಳಂಡ ಮೊಣ್ಣಯ್ಯನವರು, ಚೌರಿರ ಅಪ್ಪಯ್ಯನವರು, ಯಂ. ಯಡಿ. ಸಿದ್ದೀಕರು, ತೆಕ್ಕಡ ಆನಂದಯ್ಯನವರು, ಜಿ. ಯಂ. ಮಂಜುನಾಥ್ಯಯ್ಯನವರು, ಚೌಡ್ಲು ಕಾಳಪ್ಪನವರು ಮತ್ತು ಸಿಂಗೂರು ಮೊದಪ್ಪನವರು.

ಮೆ. ಕೆ. ಪಿ. ಚಿಣ್ಣಪ್ಪನವರು ಜನರಲ್ ಸೆಕ್ರೆಟರಿ ಕೆಲಸಕ್ಕೆ ಕೊಟ್ಟ ರಾಜೀನಾಮೆಯನ್ನು ಅಂಗೀಕರಿಸಿಕೊಂಡು, ಅವರ ಬದಲಿಗೆ ಮೆ. ಐ. ಸಿ. ಸುಬ್ಬಯ್ಯನವರನ್ನು ಆರಿಸಲಾಯಿತು.

ರಾಜೀನಾಮೆಕೊಟ್ಟ ಮೆ. ಕೆ. ಪಿ. ಚಿಣ್ಣಪ್ಪನವರು ಸೆಕ್ರೆಟರಿಯಾಗಿ ಮೂಡಿದ ಕೆಲಸಕ್ಕೆ ಅವರಿಗೆ ಅಭಿವಂದನೆಗಳು ಒಪ್ಪಿಸಬೇಕೆಂತ ತೀರ್ಮಾನವಾಯಿತು.

1932 ನೇ ಇಸವಿ ಮಾರ್ಚಿ ತಿಂಗಳಿನಿಂದ ನವಂಬರ್ ಅಖೈರ್ ವರೆಗಿನ ಲೆಖ್ಖ ನೋಡಿ ಒಪ್ಪಲಾಯಿತು.

ಕೊಡಗು ಕಂಪೆನಿ ಏಜೆಂಟರಾದ ಯಂ. ಬಿದ್ದಪ್ಪನವರನ್ನು ಸಂಘದ ಚಂದಾ ವಸೂಲ್ ಮಾಡುವಂತೆ ಕೇಳಿಕೊಳ್ಳಬೇಕಂತಲೂ, ಹಾಗೆ ವಸೂಲ್ ಮಾಡಿದ ಮೊಬಲಗಿಗೆ ಶೇಕಡ 12½ ಯಂತೆ ಕಮಿಶನ್ ಕೊಡಬಹುದೆಂತಲೂ ತೀರ್ಮಾನಿಸಲಾಯಿತು. ಮೆ. ಅಂಜಪವಂಡ ತಿಮ್ಮಯ್ಯನವರು ಅವರ ವ್ಯಾಪ್ತ್ಯದ ಮೆಂಬರುಗಳಿಂದ ಚಂದಾ ವಸೂಲ್ ಮಾಡಬೇಕೆಂತ ಕೇಳಿಕೊಂಡದ್ದಕ್ಕೆ ಒಪ್ಪಿದರು.

ಅಧ್ಯಕ್ಷರಿಗೆ ವಂದನೆಯೊಡನೆ ಸಭೆಯು ಬರ್ಕಾಸ್ತಾಯಿತ.

ಸಿ. ಯನ್. ಮೆಕಪ್ಪಯ್ಯ,
(ಅಧ್ಯಕ್ಷ)

ಹರಿಜನರ ಮಹಾಸಭೆ.

(ಸ್ವಂತ ಜಾತ್ಮಿದಾರರಿಂದ)

ಕಿಗ್ಗಟ್ಟುನಾಡು ತಾಲೋಕಿನ ಹರಿಜನರ ಮಹಾಸಭೆಯೊಂದು ಈ ತಾ. 2 ರಲ್ಲಿ ಪೊನ್ನಂಪೇಟೆ ಶಾರದಾಶ್ರಮದ ಒಳ ನಡೆಯಿತು. ಸುಮಾರು 150 ಹರಿಜನರೂ, 20 ಮೇಲ್ಜಾತಿಯವರೂ ಹಾಜರಿದ್ದರು. ಶಾರದಾಶ್ರಮದ ಸ್ವಾಮಿ ಶಾಂಭವಾನಂದರವರು ಮೀಟಿಂಗಿನ ಉದ್ದಿಶ್ಯವನ್ನು ವಿವರಿಸಿದರು. ಮೆ. ಸಿ. ಯಸ್. ಪೂನಯ್ಯನವರ ಸೂಚನೆ ಮೇರೆ ಸ್ವಾಮಿ ಶಾಂಭವಾನಂದರವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು.

ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಬಗ್ಗೆ ಮಹಾತ್ಮ ಗಾಂಧಿಯವರು ತುಂಬಾ ಪ್ರಯತ್ನಪಡುತ್ತಿರುವರೆಂತಲೂ, ಈ ಉದ್ದಿಶ್ಯ ಅಸ್ಪೃಶ್ಯರನ್ನು ಇನ್ನು ಮುಂದೆ ಹರಿಜನರೆಂದು ಕರೆಯಬೇಕೆಂದು ಮಹಾತ್ಮರು ಸೂಚಿಸಿರುವರೆಂತಲೂ ಮುಂತಾಗಿ ಮೆ. ಸಿ. ಯಸ್. ಪೂನಯ್ಯನವರು ಮಾತಾಡಿ, ಹರಿಜನರ ಏಳಿಗೆಗಾಗಿ ಅವರು ಹೇಗೆ ವರ್ತಿಸಬೇಕೆಂಬುದಾಗಿ ಗಾಂಧೀಜಿಯವರು ಕೊಟ್ಟಿರುವ ಸೂಚನೆಗಳನ್ನು ಓದಿ ಹೇಳಿದರು.

ಮೆ. ಪಿ ಐ. ಬೆಳ್ಯಪ್ಪನವರು ತಮ್ಮ ಚಿಕ್ಕ ಭಾಷಣದಲ್ಲಿ ಹೇಳಿದ್ದೇನೆಂದರೆ—'ಮಹಾತ್ಮ ಗಾಂಧಿಯವರ ಉಪವಾಸವ್ರತದಿಂದ ಅಸ್ಪೃಶ್ಯತಾ ನಿವಾರಣೆ ಚಳವಳಿಕ್ಕೆ ಬಹು ದೊಡ್ಡ ಶಕ್ತಿ ದೊರೆತಿದೆ. ಅವತಾರಪುರುಷರಂತಿರುವ ಗಾಂಧೀಜೀಯವರೇ ಹಿಂದೂ ಮತದ ಈ ದೊಡ್ಡ ಕುಂದಕದ ನಿವಾರಣೆಗೆ ತನ್ನ ಜೀವವನ್ನು ದಾನವೂಡಿರುವಾಗ್ಯೆ ಅಸ್ಪೃಶ್ಯತಾ ಭಾವನೆಯು ಹೆಚ್ಚು ದಿನ ನಿಲ್ಲಲಾರದು. ಮಹಾತ್ಮರ ಪ್ರಭಾವದಿಂದ ಕಠಿಣ ಸನಾತನಿಗಳೇ ಈ ಕಾರ್ಯಕ್ಕೆ ಕೈ ಹಾಕಿರುವ ಈ ಸಮಯದಲ್ಲು ಹರಿಜನರು ನಿದ್ರೆಯನ್ನು ಬಿಟ್ಟು ಮುಂದಕ್ಕೆ ಬರಬೇಕಾಗಿದೆ. ಮಹಾತ್ಮರ ಸೂಚನೆಯಂತೆ, ಹರಿಜನರು ತಮ್ಮ ಅಭಿವೃದ್ಧಿಗಾಗಿ ಪ್ರತಿನಿತ್ಯ ಸಾಧ್ಯವಿಲ್ಲದಿದ್ದರೂ ವಾರಕ್ಕೆ 2—3 ಸಾರಿಯಾದರೂ ಸ್ನಾನ ಮಾಡುವುದು, ವಾರಕ್ಕೊಂದು ಸಾರಿ ಬಟ್ಟೆ ಒಗೆಯುವುದು, ಮನೆಮಂದಿಗಳನ್ನು ಜೊಕ್ಕಟವಾಗಿಟ್ಟು ಕೊಳ್ಳುವುದು, ಸತ್ತ ಪ್ರಾಣಿಗಳ ಮತ್ತು ದನದ ಮಾಂಸ ತಿನ್ನುವುದನ್ನು ಬಿಡುವುದು, ಸತ್ತ ದನದ ಚರ್ಮವನ್ನು ಸುಲಿದು ಬಾಕಿ ಶವವನ್ನು ಹೂತಮೇಲೆ ಸ್ನಾನ ಮಾಡುವುದು, ಕುಡಿಕ ತನವನ್ನು ಬಿಡುವುದು, ತಮ್ಮ ಮಕ್ಕಳನ್ನೆಲ್ಲಾ ಶಾಲೆಗೆ ಕಳುಹಿಸುವದು, ದೊಡ್ಡವರಿಗೆ ಸಾಧ್ಯವಿದ್ದಲ್ಲಿ ರಾತ್ರಿ ಶಾಲೆಗಳನ್ನು ಏರ್ಪಡಿಸಿಕೊಳ್ಳುವದು, ರಾಮ ಭಜನೆಯ ಕೂಟಗಳನ್ನು ಮಾಡುವುದು ಮುಂತಾದ ಕಾರ್ಯಗಳನ್ನು ನಡಿಸಲು ಒಂದು ಸಂಘವನ್ನು ಏರ್ಪಡಿಸಿಕೊಳ್ಳುವದು ಅವಶ್ಯ. ಅಸ್ಪೃಶ್ಯ ಭಾವನೆಗೆ ಕಾರಣರಾದ ಮೇಲ್ಜಾತಿಯವರೂ, ಹರಿಜನರೂ ತಮ್ಮ ತಮ್ಮ ಭಾಗದ ಕೆಲಸವನ್ನು ಮಾಡಿ ಈ ಭಾವನೆಯನ್ನು ಹೋಗಲಾಡಿಸಿಕೊಂಡು, ಬಡಜನೋದ್ಧಾರಕ್ಕಾಗಿರುವ ಮಹಾತ್ಮರ, ಅಮೂಲ್ಯವಾದ ಜೀವವನ್ನು ಉಳಿಸಬೇಕು.'

ಮೆ. ಪಿ. ಜೆ. ಮುದ್ದಮ್ಮಯ್ಯನವರು ಮಾತಾಡುತ್ತಾ, ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವುದರಿಂದ ರೋಗಗಳು ಉಂಟಾಗುತ್ತವೆ; ಗೋಮಾಂಸ ತಿನ್ನುವದು ಹಿಂದೂಗಳಿಗೆ ಸಾಪಕರ; ಅಮಲು ಪದಾರ್ಥ ಸೇವನೆಯಿಂದ ದೇಹ, ಧನ ಮತ್ತು ಮಾನಹಾನಿಯಾಗುತ್ತೆ; ಶುಚಿಯಿಂದ ಆರೋಗ್ಯಕೆಡುತ್ತೆ. ಇದನ್ನೆಲ್ಲಾ ಬಿಡಲು ಹರಿಜನರು ತಯಾರಾಗಬೇಕು ಮೇಲ್ಜಾತಿಯವರೂ ಈ ಕೆಲಸದಲ್ಲಿ ಸಹಾಯ ಮಾಡತಕ್ಕದ್ದು ಎಂದು ಮುಂತಾಗಿ ಹೇಳಿದರು.

ನಂತರ ಹಾಜರಾದ ಪೈಕಿ ಮೆ. ಗಳಾದ ತೂಚಮಂಡ ದೇವಯ್ಯನವರು, ಕೈಕೇರಿ ಮಂದಪ್ಪನವರು, ನಡಿಕೇರಿ ಪೇದಪ್ಪನವರು, ದೇವನೂರು ಇದಿಯನವರು, ಚಿಕ್ಕಮುಂಡೂರು ಪುಟ್ಟಪ್ಪನವರು, ಬಾಳೆಲೆ ಜೆನ್ನಪ್ಪನವರೇ ಮೊದಲಾದವರು ತಮ್ಮ ಕೇರಿಯ ಸ್ಥಿತಿಗೆ ಬಡತನವು ಮತ್ತು ವಿದ್ಯಾಹೀನತೆಯೇ ಕಾರಣವೆಂತಲೂ, ಮೇಲ್ಜಾತಿಯವರು ಸಹಾಯ ಮಾಡಿದರೆ ತಮ್ಮ ಕೈಯ್ಯಲ್ಲಾಗುವ ಪ್ರಯತ್ನ ಮಾಡುತ್ತೇವೆಂತಲೂ ಮುಂತಾಗಿ ಮಾತಾಡಿದರು.

ಆ ಮೇಲೆ ಅಧ್ಯಕ್ಷರು, ಕಿಗ್ಗಟ್ಟುನಾಡು ಹರಿಜನರದೊಂದು ಸಂಘವನ್ನು ಏರ್ಪಡಿಸತಕ್ಕದ್ದು, ಅದರ ಮೀಟಿಂಗು ತಿಂಗಳಿಗೊಮ್ಮೆ ನಡೆಯತಕ್ಕದ್ದು, 18 ವರ್ಷ ಪ್ರಾಯವಿರುವ ಹರಿಜನ ಗಂಡಸರೆಲ್ಲರೂ ಅದರ ಮೆಂಬರುಗಳಾಗಬೇಕು, ವಾರ್ಷಿಕ ಚಂದವು 8 ಆಣೆ ಆಗಿರಬೇಕು, ಎಂಬ ವಿಷಯಗಳನ್ನು ಒಂದೊಂದಾಗಿ ಸಭೆಯ ಮುಂದಿಟ್ಟು ನೆರೆದವರ ಸಮ್ಮತಿಯನ್ನು ತಗೆದುಕೊಂಡರು. ಬರುವ ಮೀಟಿಂಗಿಗೆ ಎಲ್ಲಾ ಹರಿಜನರನ್ನು ಸೇರಿಸುವ ಬಗ್ಗೆ ಪ್ರತಿಯೊಂದು ಗ್ರಾಮಕ್ಕೂ ಇಬ್ಬರು ಮೆಂಬರುಗಳಾಗಿ ನೇಮಿಸಲ್ಪಟ್ಟರು. ಈ ಸಂಘದ ಉದ್ದೇಶಗಳನ್ನೂ, ನಿಬಂಧನೆಗಳನ್ನೂ ತಯಾರಿಸುವ ಬಗ್ಗೆ ಈ ಕೆಳಗಿನ ಮೆಂಬರುಗಳ ಕಮಿಟಿಯು ನೇಮಿಸಲ್ಪಟ್ಟಿತು. ಸ್ವಾಮಿ ಶಾಂಭವಾನಂದರವರು (ಅಧ್ಯಕ್ಷರು,) ಮೆ. ಗಳಾದ ಪಿ. ಜೆ. ಮುದ್ದಮ್ಮಯ್ಯನವರು (ಸೆಕ್ರೆಟರಿ,) ಜಮ್ಮಡ ಮೊದಪ್ಪನವರು, ಚೆಪ್ಪುಡಿರ ಯಸ್. ಪೂನಯ್ಯನವರು, ಬಾಳೆಲೆ ಇದಿಯನವರು, ತೂಚಮಂಡ ಜೆನ್ನಪ್ಪನವರು, ಹೊನ್ನಿಕೊಪ್ಪಲು ಜೋರನವರು, ಚಿಕ್ಕಮುಂಡೂರು ಪುಟ್ಟನವರು, ಕೈಕೇರಿ ಮಂದನವರು, ಈಡೂರು ಕುಟ್ಟನವರು, ಮತ್ತು ಕೋತೂರು ವೆಂಕಣ್ಣನವರು.

ಅಧ್ಯಕ್ಷರ ಅಖೈರು ಭಾಷಣವಾದ ಮೇಲೆ ಫಲಹಾರವು ಹಂಚಲಾಯಿತು.

ನೋಟೀಸು.

ಎರಡು ನರ್ಸ್‌ಗಳನ್ನು ಮಡಿಕೇರಿ ಆಸ್ಪತ್ರೆಯಲ್ಲಿಯೂ, ಎರಡು ನರ್ಸ್‌ಗಳನ್ನು ವೀರಾಜಪೇಟೆ ಆಸ್ಪತ್ರೆಯಲ್ಲಿಯೂ ಆರು ತಿಂಗಳ ವರೆಗೆ ತರಬೇತುಮಾಡುವ ಬಗ್ಗೆ ಒಬ್ಬೊಬ್ಬರಿಗೆ 100 ರೂ. ಯಂತೆ ವೇತನ ಕೊಡಲು ಕೊಡಗಿನ 'ಇಂಡಿಯನ್ ರೆಡ್ ಕ್ರಾಸ್' ಸಂಘದವರು ಒಪ್ಪಿಕೊಂಡಿರುವರು. ವಿದ್ಯಾಭ್ಯಾಸ ಮತ್ತು ವಾಸಸ್ಥಳವನ್ನು ನಮೂದಿಸಿ ಉಮೇದುವಾರರು ಅಪ್ಲಿಕೇಶನನ್ನು ಸಿವಿಲ್ ಸರ್ಜನರಿಗೆ ಬರಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಕೊಡಗಿನ ಸಿವಿಲ್ ಸರ್ಜನರ ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ,
ತಾ. 5—12—1932.

ಡಿ. ಫ್ರಾಮ್ಜಿ,
ಅಫಿಷಿಯೇಟಿಂಗ್ ಸಿವಿಲ್ ಸರ್ಜನ್.

2—1

ವೇದಾಂತ ಸಂಘದ ಕಟ್ಟಡ ಫಂಡು.

ಮಡಿಕೇರಿ ವೇದಾಂತ ಸಂಘದ ಕಟ್ಟಡದ ಬಗ್ಗೆ ದ್ರವ್ಯ ಸಹಾಯ ಮಾಡುವದಾಗಿ ಈವರೆಗೆ ವಾಗ್ದಾನ ಮಾಡಿರುವ ಸಂಘದ ಮೆಂಬರುಗಳು ಮತ್ತು ಮಹನೀಯರುಗಳು :—

ಮೆಂಬರುಗಳು

ಮೆ. ಪಟ್ಟಮಾಡ ಚಿಣ್ಣಪ್ಪನವರು	100 ರೂಪಾಯಿ.
,, ಆರ್. ಯಂ. ಕಪನಯ್ಯನವರು	300 (125 ಸಂದಿದೆ)
,, ಗುಡ್ಡಂಡ ಸುಬ್ಬಯ್ಯನವರು	100
,, ನೆರವಂಡ ಕುಟ್ಟಪ್ಪನವರು	60
,, ಎಂ. ಶಂಕರನಾರಾಯಣರಾಯರು	10
,, ಪಳಂಗಂಡ ಅಪ್ಪಯ್ಯನವರು	30
,, ಬಾಡಂರಣಿಯಂಡ ಗಣಪತಿಯವರು	50
,, ಚೇಂದ್ರಿಮಾಡ ಗಣಪತಿಯವರು	20
,, ಮುಕ್ಕಾಟಿರ ಅಚ್ಚಯ್ಯನವರು	50
,, ಕೊಕ್ಕೆಂಗಡ ಬೆಳ್ಯಪ್ಪನವರು	15
,, ಉದಿಯಂಡ ಮುತ್ತಣ್ಣನವರು	10
,, ಕುಂಬೆರ ಸೋಮಯ್ಯನವರು	10
,, ಸಿ.ಬಿ ಜೈಸಿಂಗರು (ಗೌರವಮೆಂಬರು)	100
,, ಚೇನಂಡ ಅಪ್ಪಯ್ಯನವರು	25
,, ಬೊಳ್ಳಂಡ ಐಯ್ಯಪ್ಪನವರು	75
,, ಸಿ. ಅಚ್ಚುತರಾಯರು	25
,, ಜೆರಿಯಮನೆ ಪೊನ್ನಪ್ಪನವರು	25
,, ಎಂ.ಎನ್ ಅನಂತಪದ್ಮನಾಭರಾಯರು	20
,, ಬಿದ್ದಂಡ ಬೆಳ್ಯಪ್ಪನವರು	100
ಜುಮ್ಲೆ	1125

ಮೆಂಬರಲ್ಲದ ಮಹನೀಯರು.

ಮೆ. ಕೋದಂಡ ದೇವೈಯ್ಯನವರು	125 (ಸಂದಿದೆ)
,, ಕಾಡ್ಯಮಾಡ ಐಯ್ಯಪ್ಪನವರು	30
ಮಿಸೆಸ್ ಡಾಕ್ಟರ್ ಕೋದಂಡ ನಂಜಪ್ಪನವರು	25 (ಸಂದಿದೆ)
ಮಿಸೆಸ್ ಕೋದಂಡ ತಿಮ್ಮಯ್ಯನವರು	100
ಜುಮ್ಲೆ	280

ಜಿ. ಸುಬ್ಬಯ್ಯ,
(ಕಾರ್ಯದರ್ಶಿ.)

COORG CIVIL SURGEON'S OFFICE,
Mercara, the 3rd December 1932

NOTICE.

Sealed tenders will be received at the Civil Surgeon's Office, Mercara, up to 11 a. m. on Friday the 20th January 1933, for the supply by contract of all articles of diet, etc, required separately for the use of the in-patients of (1) Mercara, (2) Virajpet and (3) Somwarpet hospitals from 1st April 1933 to 31st March 1934 (both days inclusive).

For further particulars apply to the Medical Officer in charge of the hospitals concerned.

D. FRAMJEE,
Offg. Civil Surgeon, Coorg

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, 3—12—1932.

ನೋಟೀಸು.

(1) ಮಡಿಕೇರಿ, (2) ವೀರಾಜಪೇಟೆ ಮತ್ತು (3) ಸೋಮವಾರಪೇಟೆ ಆಸ್ಪತ್ರೆಗಳಲ್ಲಿರುವ ಕಾಯಿಲಸ್ಥರ ಉಪಯೋಗಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಕಂಟ್ರಾಕ್ಟು ಮೂಲಕ 1933ನೇ ಏಪ್ರಿಲ್ 1ರಿಂದ 1934ನೇ ಇಸವಿ ಮಾರ್ಚಿ 31ರ ವರೆಗೆ (ಈ ಎರಡು ದಿವಸಗಳು ಸೇರಿ) ಈ ಮೂರು ಆಸ್ಪತ್ರೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒದಗಿಸಿ ಕೊಡಲು ಮುದ್ರೆ ಹಾಕಿದ ದರಕಾಸ್ತುಗಳು (ಟೆಂಡರ್ಸ್) 1933ನೇ ಇಸವಿ ಜನವರಿ 20ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಯ ವರೆಗೆ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುವವು.

ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ಆಸ್ಪತ್ರೆಗಳ ಚಾರ್ಜಿನಲ್ಲಿರುವ ಮೆಡಿಕಲ್ ಆಫೀಸರಿಗೆ ಬರೆದುಕೊಳ್ಳುವುದು.

ಡಿ. ಫ್ರಾಮ್ಜಿ,
2—1 ಅಫಿಷಿಯೇಟಿಂಗ್ ಸಿವಿಲ್ ಸರ್ಜನ್, ಕೊಡಗು.

WANTED.

Candidates for Electrical, Automobile, Wireless, Telegraph and Commercial classes opening shortly. Railfare paid. Rules on 2 anna stamps.

IMPERIAL GUILD INSTITUTE,
6—2 Bombay, 18.

Supplement to the issue of 'Kodagu' of 9—12—1932.

ಅಸ್ಪೃಶ್ಯತಾ ನಿವಾರಣೆ ದಿನ.

ಮಹಾತ್ಮ ಗಾಂಧಿಯವರ ಅಪೇಕ್ಷೆ.

"ಈ ತಾ. 18ನೇ ಆದಿತ್ಯವಾರವನ್ನು ಅಸ್ಪೃಶ್ಯತಾ ನಿವಾರಣೆ ದಿನವಾಗಿ ಹಿಂದೂಸ್ಥಾನದ ಪ್ರತಿಯೊಂದು ಪಟ್ಟಣ, ಗ್ರಾಮ ಮತ್ತು ಮನೆಯಲ್ಲಿ ಆಚರಿಸಿ, ಈ ಕೆಳಗಿನ ಕಾರ್ಯಕ್ರಮವನ್ನು ನಡಿಸಬೇಕಾಗಿ ಮಹಾತ್ಮ ಗಾಂಧಿಯವರ ಅಪೇಕ್ಷೆಯೊಗಿದೆ.

ಅಸ್ಪೃಶ್ಯತಾ ನಿವಾರಣೆ ಸಂಘದ ಕೆಲಸಕ್ಕಾಗಿ ಎಲ್ಲಾ ಕಡೆಗಳಲ್ಲಿಯೂ ಮನೆಯಿಂದ ಮನೆಗೆ ಚಂದಾ ವಸೂಲಾತಿ ಮಾಡುವುದು.

ಕೆಲವು ಮೇಲ್ಜಾತಿಯ ಹಿಂದುಗಳು ಹರಿಜನರ ವಾಸಸ್ಥಳವನ್ನು ಶುಚಿ ಮಾಡಿಯೂ, ಅವರ ಸೇವೆ ಮಾಡಿಯೂ ಅವರಿಗೆ ಉದಾಹರಣೆ ಹಾಕಿಕೊಡುವುದು.

ಹರಿಜನರ ಮತ್ತು ಮೇಲ್ಜಾತಿಯ ಹಿಂದೂಗಳ ಮಕ್ಕಳಿಗೆ ವಿಶ್ರವಾಗಿ ಆಟೋಟಗಳನ್ನೂ ವಿನೋದ ಕೂಟಗಳನ್ನೂ ನಡಿಸುವುದು.

ಹರಿಜನರು ಮತ್ತು ಮೇಲ್ಜಾತಿ ಹಿಂದೂಗಳು ವಿಶ್ರವಾಗಿ ಪ್ರಾರ್ಥನಾಗೀತೆಗಳನ್ನೂ, ಕೀರ್ತನೆ ಕೂಟಗಳನ್ನೂ ನಡಿಸುವುದು ಮತ್ತು ಇವೆರಡು ಪಂಗಡಗಳನ್ನು ಜೊತೆ ಸೇರಿಸಲು ಯತ್ನಿಸುವುದು.

ಎಲ್ಲಾ ಕಡೆಗಳಲ್ಲಿಯೂ ಸಾರ್ವಜನಿಕ ವೊಟಿಂಗುಗಳನ್ನು ಮಾಡಿ, ಅಸ್ಪೃಶ್ಯತೆಯ ಕೆಡಕುಗಳನ್ನು ಚೆನ್ನಾಗಿ ವಿವರಿಸುವುದು ಮತ್ತು ಶೀಘ್ರದಲ್ಲೇ ಅದರ ನಿವಾರಣೆ ಬಗ್ಗೆ ದೇವರಿಗೆ ಪ್ರಾರ್ಥಿಸುವುದು.

ಈ ವೊಟಿಂಗುಗಳಲ್ಲಿ, ಎಲ್ಲಾ ಹಿಂದೂ ದೇವಸ್ಥಾನಗಳಿಗೆ ಮುಖ್ಯವಾಗಿ ಗುರುವಾಯೂರು ದೇವಸ್ಥಾನಕ್ಕೆ ಹರಿಜನರ ಪ್ರವೇಶಕ್ಕೆ ಎಡೆಬಿಡದೆ ಚಳವಳ ನಡಿಸುವಂತೆ ಠರಾವುಗಳನ್ನು ಪಾಸುಮಾಡುವುದು.

ದೇಶದ ಮುಂದಿನ ಜನಾಂಗವಾದ ವಿದ್ಯಾರ್ಥಿಗಳೆಲ್ಲರೂ ಗುರುವಾಯೂರು ದೇವಸ್ಥಾನಕ್ಕೆ ಹರಿಜನರನ್ನು ಬಿಡಬೇಕೆಂಬ ಅರ್ಜಿಗೆ ರುಜು ಮಾಡಿ ಸದರಿ ದೇವಸ್ಥಾನದ ಮುಖ್ಯಾಧಿಕಾರಿಯೂದ ಕಲ್ಲಿಕೋಟೆಯ ಜಾಮೊರಿನ್‌ರವರಿಗೆ ಕಳುಹಿಸುವುದು.

ದೇಶೀಯರಲ್ಲಿ ವಿಜ್ಞಾಪನೆ.

ಅಸ್ಪೃಶ್ಯತೆಯನ್ನು ಶೀಘ್ರದಲ್ಲಿಯೇ ಹೋಗಲಾಡಿಸುವ ಪ್ರಯತ್ನ ಮಾಡುತ್ತಾ, ಮಲಬಾರಿನ ಗುರುವಾಯೂರು ದೇವಸ್ಥಾನಕ್ಕೆ ಹರಿಜನರ ಪ್ರವೇಶಕ್ಕೆ ಬಿಡುವಂತೆ ಮಾಡದೆ ಹೋದರೆ ಮಹಾತ್ಮ ಗಾಂಧಿಯವರು ಬರುವ ಜನವರಿ ತಾ. 2 ರಲ್ಲಿ ಉಪವಾಸವನ್ನು ಪ್ರಾರಂಭಿಸಲು ನಿಶ್ಚಯಿಸಿರುವರು. ಆದುದರಿಂದ ನಮ್ಮ ದೇಶೀಯರೆಲ್ಲರೂ ಮಹಾತ್ಮರ ಅಪೇಕ್ಷೆಯಂತೆ ಮೇಲಿನ ಕಾರ್ಯಕ್ರಮವನ್ನು ನಡಿಸಿ ಮಹಾತ್ಮರ ಪ್ರಾಣವನ್ನು ಉಳಿಸಲು ಸಹಾಯ ಮಾಡಬೇಕಾಗಿ ಬೇಡುತ್ತೇವೆ.

ಮಡಿಕೇರಿ.
ತಾ, 9—12—32.

ಸಿ. ಯಸ್. ವೆಂಕಪ್ಪಯ್ಯ
ಸಿ. ಐ. ಬೆಳ್ಯಪ್ಪ.

K. P. M.

ಕೊಡಗಿನಲ್ಲಿ ಸತ್ಯಾಗ್ರಹ.

ಹುದಿಕೇರಿ ಹುತ್ತರಿ ಸಂತೆಯಲ್ಲಿ ದಸ್ತಗಿರಿ.

ಜನಸಮುದಾಯದ ಉತ್ಸಾಹಭರಿತವಾದ ಜಯಘೋಷ.

ಜುಲ್ಮಾನೆಗಾಗಿ ದನಗಳ ಜಪ್ತಿ ಮತ್ತು ಜಪ್ತಿಯ ಮೇಲೆ ತಕರಾರು ಅರ್ಜಿಗಳು.

ಈ ತಾ. 5ನೇ ಸೋಮವಾರ ಹುದಿಕೇರಿಪೇಟೆಯಲ್ಲಿ ಕಾಂಗ್ರೆಸಿನ ಸ್ವಯಂಸೇವಕರಾದ ಶ್ರೀಯುತರುಗಳಾದ ಅಳಮೇಂಗಡ ಮಾಚ್ಚಯ್ಯನವರು, ಅರಮಣಮಾಡ ನಾಚಪ್ಪನವರು, ಚಮಣಮಾಡ ಮಾದಮ್ಮಯ್ಯನವರು, ಮಲ್ಲಂಡ ಮಾದಯ್ಯನವರು ಮತ್ತು ಹರಿಜನರ (18 ವರ್ಷ ಪ್ರಾಯದ) ಸುಬ್ಬನವರು ಸೈಕ್ಲೊಸ್ಟೈಲ್ ಮಾಡಿದ ಸತ್ಯಾಗ್ರಹ ಕರಪತ್ರಗಳನ್ನು ಹಂಚುತ್ತಾ, ಸಾರಾಯಿ ಅಂಗಡಿಯಿಂದ ಸಂತೆಮೂಳದ ಕಡೆಗೆ ಜಯಘೋಷ ಮಾಡುತ್ತಾ ಬರುತ್ತಿದ್ದಾಗ್ಗೆ ಪೊಲೀಸು ಸಬ್ ಇನ್‌ಸ್ಪೆಕ್ಟರವರು 1 ಡಜನ್ ಪೊಲೀಸಿನವರೊಡನೆ ಬಂದು ಅವರೈವರನ್ನು ದಸ್ತಗಿರಿ ಮಾಡಿ, ಪೇಟೆಯಿಂದ ಹೊರಗೆ ಕರೆದುಕೊಂಡು ಹೋದರು. 1000 ಕ್ಕಿಂತ ಹೆಚ್ಚಾಗಿ ಜನರು ಉತ್ಸಾಹದಿಂದ ಜಯಘೋಷ ಮಾಡುತ್ತಾ ಕೈದುಮಾಡಲ್ಪಟ್ಟವರನ್ನು ಸುಮಾರು ಅರ್ಧ ಮೈಲು ದೂರ ಹಿಂಬಾಲಿಸಿದರು; ನಂತರ ಕೆಲವರಿಂದ ಸಮಾಧಾನಗೊಳಿಸಲ್ಪಟ್ಟು ವಾಪಸು ಹೋದರು. ದಸ್ತಗಿರಿಯಾದವರನ್ನು ಸಾಯಂಕಾಲ ಬಸ್ಸಿನಲ್ಲಿ ವೀರಾಜಪೇಟೆಗೆ ಒಯ್ದರು.

ಮರುದಿನ ಮುನ್ಸೀಫ್ ಮೇಜಿಸ್ಟ್ರೇಟು ಕೋರ್ಟಿನಲ್ಲಿ ವಿಚಾರ ನಡೆದು ಅವರೈವರಿಗೂ ಮೂರು-ಮೂರು ತಿಂಗಳು ಕಠಿಣ ಸಜೆಯು ಮತ್ತು 15 ರೂ. ಜುಲುಮಾನೆಯೂ, ಜುಲುಮಾನೆ ಕೊಡದೆ ತಪ್ಪಿದರೆ ಒಂದು ತಿಂಗಳು ಹೆಚ್ಚಿನ ಸಜೆಯೂ ವಿಧಿಸಲಾಯಿತೆಂದೂ, ಮೂರನೆ ದಿನ ಅವರು ಕಣ್ಣೂರು ಸೆಂಟ್ರಲ್ ಜೈಲಿಗೆ ಕಳುಹಿಸಲ್ಪಟ್ಟರೆಂದೂ ವರ್ತಮಾನ.

ಸತ್ಯಾಗ್ರಹಕ್ಕಾಗಿ ಈಗ ಜೈಲುವಾಸದಲ್ಲಿರುವ ನೆ. ನುಚ್ಚಿಯಂಡ ಐಯ್ಯಪ್ಪನವರು 20 ರೂ. ಜುಲುಮಾನೆ ವಸೂಲಾತಿಗಾಗಿ ಅವರ ತಂದೆ ಗಣಪತಿಯವರ 1ಹಸು ಮತ್ತು ಅದರ ಕರುವೂ, ಮೆ. ಮಚ್ಚಿಯಂಡ ಕಾರ್ಯಪ್ಪನವರ ಜುಲುಮಾನೆಗಾಗಿ ಅವರ ತಂದೆ ಸುಬ್ಬಯ್ಯನವರ 2 ಕೋಣಗಳೂ ಮತ್ತು ಮೆ. ಮೂಕಳೆರ ಕುಶಾಲಪ್ಪನವರ ಜುಲುಮಾನೆಗಾಗಿ ಅವರ ಅಣ್ಣ ಸಂಜಪ್ಪನವರ 1ಎತ್ತು ಮತ್ತು 1ಹಸುವನ್ನೂ ಕಳೆದ ತಾ. 24ರಲ್ಲಿ ಪೊಲೀಸಿನವರು ಜಪ್ತಿ ಮಾಡಿ ಪಟೇಲರವರ ಜಾವಿಗೆ ಮೇಲೆ 15 ದಿವಸಗಳ ವರೆಗೆ ಬಿಟ್ಟಿರುವರೆಂತಲೂ, ಈ ದನಗಳ ಮೂಲೀಕರು ಮೆ. ಪಳೆಯಂಡ ಕುಶಾಲಪ್ಪ ಲಾಯರವರ ಮೂಲಕ ತಕರಾರು ಅರ್ಜಿಗಳನ್ನು ಹಾಕಿರುವರೆಂತಲೂ, ಅವುಗಳ ವಿಚಾರವು ಈ ತಾರೀಕು 9ಕ್ಕೆ ಇಡಲಾಗಿದೆಯೆಂತಲೂ ವರ್ತಮಾನ

ಸೂಚನೆ.

ಹುಶ್ರೀ ಹಬ್ಬಕ್ಕಾಗಿ "ಕೊಡಗು" ಕಂಪೆನಿಯು ಆಫೀಸು ಬರುವ ವಾರ ಮುಚ್ಚಲ್ಪಡುವ ಕಾರಣ ನಮ್ಮ ಪತ್ರಿಕೆಯು ಈ ತಾ. 16ರ ಸಂಚಿಕೆಯು ಪ್ರಕಟವಾಗುವುದಿಲ್ಲ.

ತಾ. 9—12—32 ಮ್ಯಾನೇಜರ್.

ಒಳದೇಶ.

ಕಳೆದ ಆಕ್ಟೋಬರು ತಿಂಗಳಲ್ಲಿ ಕೊಡಗಿನಲ್ಲಿ 325 ಜನನಗಳೂ, 307 ಮರಣಗಳೂ ಸಂಭವಿಸಿದವೆಂದು ತಿಳಿಯುತ್ತೇವೆ.

ಈ ತಾ. 19 ರಲ್ಲಿ ಕಿಗ್ಗಟ್ಟುನಾಡು ತಾಲೂಕಿನ ಹಾ ಜನರಂ ಸಭೆಯೊಂದು ವೊನ್ನಂಪೇಟೆಯಲ್ಲಿ ನಡೆಯುವುದಾಗಿ ವರ್ತಮಾನ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ವಿಶೇಷ ಮಹಾಸಭೆಯು ತಾ. 24—12—32ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದು.

ಕೊಡಗಿನ ಭವಿಷ್ಯತ್ತನ್ನು ಕುರಿತು ತೀರ್ಮಾನಿಸಲು ಎಲ್ಲಾ ಪಕ್ಷಗಳ ಕಾನ್‌ಫರೆನ್ಸೊಂದು ಈ ತಾ. 18ರಲ್ಲಿ ಮಡಿಕೇರಿಯಲ್ಲಿರುವ ಜಮಾನ್ದಾರರು ಸಂಘದ ಹಾಲ್‌ನಲ್ಲಿ ನಡೆಯುವುದೆಯೆಂದು ತಿಳಿಯುಬರುತ್ತದೆ

ಕೊಡಗಿನಲ್ಲಿ ಸಿವಿಲ್ ಸರ್ಜನರಾಗಿದ್ದು ಕಳೆದ ಮೇ ತಿಂಗಳಲ್ಲಿ ರಜೆಯಲ್ಲಿ ಹೋಗಿದ್ದ ಮೇಜರ್ ಯಫ್. ಆರ್. ತಾಂಟ್‌ನ್‌ರವರು ರಜೆ ತೀರಿ ಬೊಂಬಾಯಿ ಪ್ರಾಂತ್ಯದಲ್ಲಿ ಉದ್ಯೋಗಕ್ಕೆ ಸೇರಿರುವರಾಗಿ ತಿಳಿಯಬರುತ್ತದೆ.

ಅಖಿಲ ಕೊಡಗು ಉಪಾಧ್ಯಾಯರ ಸಂಘದ 4ನೇ ವಾರ್ಷಿಕ ಸಮ್ಮೇಳನವು ಈ ತಾ. 3, 4 ಮತ್ತು 5ರಲ್ಲಿ ನಾಪೋಕ್ಲುನಲ್ಲಿ ರಿಟಯರ್ಡ್ ತಾಲೂ ಇನ್‌ಸ್ಪೆಕ್ಟರಾದ ಮೆ. ಎ. ರಾಮರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಇದರ ವಿವರವು ಇನ್ನೊಂದು ಕಡೆ ಕೊಡಲಾಗಿದೆ.

ಇಂಡಿಯನ್ ಸಿವಿಲ್ ಸರ್ವಿಸಿಗೆ ಸ್ಪರ್ಧೆಯ ಪರೀಕ್ಷೆಯೊಂದು 1933ನೇ ನೇ ಜುಲೈ ಮತ್ತು ಆಗೊಸ್ತು ತಿಂಗಳುಗಳಲ್ಲಿ ಲಂಡನಿನಲ್ಲಿ ನಡೆಯುವುದು. ಇದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನೂ, ಅಪ್ಲಿಕ್ಷೇಶನ್ ಫಾರ್ಮನ್ನೂ ಇಚ್ಛಿಸುವವರು ನಮ್ಮ ಆಫೀಸಿನಲ್ಲಿ ಬಂದು ನೋಡಿಕೊಂಡು ಹೋಗಬಹುದು.

ಕಳೆದ ತಾ. 29ರಲ್ಲಿ ಮಂಗಳೂರಿನಲ್ಲಿ ನಡೆದ ಕಾಲೇಜು ವಿದ್ಯಾರ್ಥಿಗಳ ಆಟೋಟಗಳ ಸ್ಪರ್ಧೆಯಲ್ಲಿ ಮೆ. ಯಂ. ಬಿ. ದೇವಯ್ಯನವರು 100, 220, 440, 880 ಗಜಗಳ ಮತ್ತು 1 ಮೈಲು ಓಟಗಳಲ್ಲಿ 1ನೇಯವರಾಗಿ ಬಂದು ಇನಾಮುಗಳನ್ನು ಪಡೆದುದಲ್ಲದೆ, 'ಚ್ಯಾಂಪಿಯನ್ ಶಿಪ್' (ವೀರತನದ) ಮೆಡಲನ್ನೂ ಗೆದ್ದರೆಂದು ತಿಳಿಯಲು ಸಂತೋಷಪಡುತ್ತೇವೆ. ಸಾಯಂಕಾಲ 2½ಯಿಂದ 5 ಗಂಟೆಯೊಳಗೆ ನಡೆದ ಆಟೋಟಗಳಲ್ಲಿ ಇವರು ಒಂದರನಂತರ ಒಂದರಂತೆ 5 ಓಟಗಳಲ್ಲಿ ಗೆದ್ದದ್ದು ಸ್ಮರ್ತವ್ಯವಾಗಿದೆ.

'ಯಂ. ಪೂಣಚ್ಚ ಗಂಗವ್ವ ಕಪ್' ಹಾಕಿ ಟೂರ್ನಮೆಂಟು ಕಳೆದ ತಿಂಗಳ ಅಖೈರು ವಾರದಲ್ಲಿ ವೊನ್ನಂಪೇಟೆಯಲ್ಲಿ ನಡೆಯಿತು. 5 ಟೀಮುಗಳು ಭಾಗಿಗಳಾಗಿದ್ದವು. ತಾರೀಕು 29—11—32ರಲ್ಲಿ ನಡೆದ ಅಖೈರು ಆಟದಲ್ಲಿ ಗೋಣಿಕೊಪ್ಪಲು ಯೂನಿಯನ್ನಿನವರು ವೊನ್ನಂಪೇಟೆ ಕ್ಲಬ್‌ನವರನ್ನು ಸೋಲಿಸಿ ಕಪ್ಪನ್ನು ಗೆದ್ದರು. ಮೆ. ಪುಚ್ಚಿಮಾಡ ಕುಟ್ಟಪ್ಪನವರು ಗೆದ್ದವರಿಗೆ ಕಪ್ಪನ್ನು ಕೊಟ್ಟರು. ಮೆ: ಪೊಡಮಾಡ ನಾಣಯ್ಯನವರು ತನ್ನ ತಂದೆಯವರ ಹೆಸರಿನಲ್ಲಿ ಒಂದು ಹಾಕಿ ಕಪ್ಪನ್ನು ಕೊಡುತ್ತಾರಾಗಿ ಸುದ್ದಿ.

ಈ ವೊದಲು ಕೊಡಗಿನ ಶಾಲೆಗಳ ಇನ್ಸ್‌ಪೆಕ್ಟರಾಗಿದ್ದು ರಜೆಯಲ್ಲಿ ಹೋಗಿದ್ದ ಮೆ. ಯಫ್. ಯಫ್. ಸಿ. ಎಡ್ಮಂಡ್ಸ್ ರವರು ರಜೆ ತೀರಿ ಕಳೆದ ತಾ. 12ರಲ್ಲಿ ಪುನಹ ಇನ್ಸ್‌ಪೆಕ್ಟರ್ ಹುದ್ದೆಯನ್ನು ಕೈಕೊಂಡಿರುವರು. ಹಂಗಾಮಿ ಇನ್‌ಸ್ಪೆಕ್ಟರಾಗಿದ್ದ ಮೆ. ಯಂ. ಸೂಲ್ತಾನ್ ವೊಹಿದಿನ್‌ರವರು ಪುನಹ ಮೈಸೂರು ಸರ್ವಿಸಿಗೆ ವರ್ಗಾಯಿಸಲ್ಪಟ್ಟಿರುವರು. ಆದುದರಿಂದ ಮೆ. ವೊಯಿದಿನ್‌ರವರು ಕೊಡಗು ಕೌನ್ಸಿಲ್ ಮೆಂಬರು ತನಕ್ಕೆ ರಾಜಿನಾಮೆ ಕೊಟ್ಟಿರುವರು. ಅವರ ಸ್ಥಳಕ್ಕೆ ಮೆ. ಎಡ್ಮಂಡ್ಸ್‌ರವರು ಮೆಂಬರಾಗಿ ನೇವಿಸಲ್ಪಟ್ಟಿರುವರು

ಮಡಿಕೇರಿ ವೇದಾಂತ ಸಂಘದ ಆಶ್ರಯದಲ್ಲಿ 'ಗೀತಾ ಜಯಂತಿ' ದಿನವು ತಾ. 8ರಲ್ಲಿ ಜಮಾನ್ದಾರರ ಸಂಘದ ಹಾಲ್‌ನಲ್ಲಿ ಆಚರಿಸಲ್ಪಟ್ಟಿತು. ಮೆ. ಆರ್. ಹೆಚ್. ಶೆಣೈಯವರು ಅಧ್ಯಕ್ಷರಾಗಿದ್ದರು. ಬೆಳಿಗ್ಗೆ ನಡೆಸಿದ ಗೀತಾ ಪಠನ ಸ್ಪರ್ಧೆಯಲ್ಲಿ ಮೆ. ಸಿ. ಯಂ. ವೆಂಕಪ್ಪಯ್ಯನವರ ಪುತ್ರಿ ಶ್ರೀಮತಿ ಸೀತಾ ಲಕ್ಷ್ಮಿಯು 1ನೇ ಇನಾಮನ್ನು ಗೆದ್ದಳು. ಸಾಯಂಕಾಲ ಭಜನೆಯಾದನಂತರ ಮೆ. ತೀಲಸಂಡ ಕಾರ್ಯಪ್ಪನವರು ಗೀತೆಯನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗವಾಯಿತು.

ಹಿಂದೂದೇಶ.

ಈ ತಾ. 4ರಲ್ಲಿ ಲಕ್ನೋದಲ್ಲಿ 'ಗಾಂಧಿ ದಿನ' ವನ್ನು ಆಚರಿಸಿದಾಗ್ಯೆ 30 ಕಾಂಗ್ರೆಸ್ ಸ್ವಯಂಸೇವಕರು ಕೈದುಮಾಡಲ್ಪಟ್ಟರು.

ಮೂರು ವಾರಗಳಿಂದ ಎಸೆಂಬ್ಲಿಯಲ್ಲಿ ಚರ್ಚೆ ನಡೆಯುತ್ತಿದ್ದ ಆರ್ಡಿನೇನ್ಸ್ ಬಿಲ್ಲು ತಾ. 7ರಲ್ಲಿ ಬಹುಮತದಿಂದ ಪಾಸಾಯಿತು.

ಅಹ್ಮದಾಬಾದಿನಲ್ಲಿ ಗುಜರಾತ್ ರಾಜಕೀಯ ಪರಿಷತ್ತನ್ನು ನಡಿಸಲು ಯತ್ನಿಸಿದಾಗ ತಾ. 4ರಲ್ಲಿ 100 ಜನರಿಗಿಂತಲೂ ಹೆಚ್ಚಾಗಿಯೂ, ತಾ. 5ರಲ್ಲಿ 20 ಜನರೂ ದಸ್ತಗಿರಿ ಮಾಡಲ್ಪಟ್ಟರು.

ಈ ತಾ. 18 ನೇ ಆದಿತ್ಯವಾರವನ್ನು ಅಸ್ಪೃಶ್ಯತಾ ನಿವಾರಣೆಯ ದಿನವಾಗಿ ಹಿಂದೂಸ್ಥಾನದ ಪ್ರತಿಯೊಂದು ಪಟ್ಟಣ, ಗ್ರಾಮ ಮತ್ತು ಮನೆಯಲ್ಲಿಯೂ ಆಚರಿಸಬೇಕಾಗಿ ಮಹಾತ್ಮ ಗಾಂಧಿಯವರ ಕೋರಿಕೆಯಾಗಿದೆ.

ಸರ್ವ ಪಕ್ಷ ಮುಸ್ಲಿಂ ಕಾನ್‌ಫರೆನ್ಸು ಈ ತಾ. 10 ಮತ್ತು 11ರಲ್ಲಿ ಲಕ್ನೋದಲ್ಲಿಯೂ, ಅಲ್ಲಹಾಬಾದಿನಲ್ಲಿ ಜಗ್ಗಟ್ಟು ನಪರಿಷತ್ತು ತಾ. 13ರಲ್ಲಿಯೂ, ಹಿಂದೂ ದೇಶದ ಸರ್ವ ಪಕ್ಷ ಪ್ರತಿನಿಧಿಗಳ ಸಭೆಯು ತಾ. 14ರಲ್ಲಿಯೂ ನಡೆಯುವವು.

ಡಿಸೆಂಬರು ತಿಂಗಳಲ್ಲಿ ತನ್ನ ಸಮಯವನ್ನೆಲ್ಲಾ ಅಸ್ಪೃಶ್ಯತಾ ನಿವಾರಣೆ ಕೆಲಸಕ್ಕೆ ಉಪಯೋಗಿಸುವ ಉದ್ದಿಶ್ಯ ವೆ. ರಾಜಗೋಪಾಲಚಾರ್ಯರು ಕಾಂಗ್ರೆಸಿನ ಅಧ್ಯಕ್ಷ ಪದವಿಯನ್ನು ಮೆ. ರಾಜೇಂದ್ರ ಪ್ರಸಾದ್‌ರವರಿಗೆ ಸಹಿಸಿರುವರೆಂದು ವರ್ತಮಾನ.

'ಲಂಡನಿನಲ್ಲಿ ಎಷ್ಟು ದುಂಡು ಮೇಜು ಪರಿಷತ್ತುಗಳು ನಡೆದರೂ ಪ್ರಯೋಜನವಿಲ್ಲ. ಮಹಾತ್ಮ ಗಾಂಧಿಯವರು ಜೀವಂತ ಶರಾಗಿರುವ ವರೆಗೆ ಅವರ ಸಹಕಾರವಿಲ್ಲದೆ ಇಂಡಿಯಾದಲ್ಲಿ ಶಾಂತಿ ಇರಲಾರದು. ಅವರ ಜೈಲು ವಾಸವನ್ನು ದೀರ್ಘ ಪಡಿಸಿದರೆ ಅವರ ಮೇಲೆ ಜನಸಮುದಾಯಕ್ಕಿರುವ ಭಕ್ತಿಯು ಮತ್ತಷ್ಟು ಹೆಚ್ಚುವುದು" ಎಂದು ಮಿಸ್ ಎಲೆನ ವಿಲ್ಕಿನ್‌ಸನ್‌ರವರು ಒಂದು ಲೇಖನದಲ್ಲಿ ಬರೆದಿರುವರು.

3ನೇ ದುಂಡು ಮೇಜು ಪರಿಷತ್ತು ನಡೆಯುತ್ತಾ ಇದೆ. ಗವರ್ನರ್ ಜನರಲರಿಗೆ ಮೂಶ್ಯರಲ್ಲಾ ಸ್ವಾಂತೀಕ ಗವರ್ನರುಗಳಿಗೂ ತುರ್ತು ವೇಳೆಯಲ್ಲಿ ಆರ್ಡಿನೇನ್ಸ್‌ಗಳನ್ನೂ, ವಿಶೇಷ ಖಾನೂನುಗಳನ್ನೂ ಮಾಡುವ ಹಕ್ಕಿರಬೇಕೆಂದೂ, ರಕ್ಷಣೆ (ಸೈನ್ಯ ಇಲಾಖೆ) ಯ ವಿಷಯದಲ್ಲಿ ಅಧಿಕಾರವೆಲ್ಲವೂ ಗವರ್ನರ್ ಜನರಲರಿಗೆ ಇರಬೇಕೆಂದೂ ಬ್ರಿಟಿಷ್ ಮೆಂಬರುಗಳ ವಾದ. ಫೈನಾನ್ಸ್ (ಆರ್ಥಿಕ) ವಿಷಯದಲ್ಲೂ ಕೂಡ ಭಿನ್ನತೆಗಳು ಹಲವು ಇಡಲ್ಪಡುವಂತೆ ಕಾಣುತ್ತೆ. ಇವ್ಯರ ವಿವಿಧ ವಾದಗಳಿಂದ ಇಂಡಿಯನ್ ಲಿಬರಲ್ ಪಕ್ಷದವರಿಗೆ ತೃಪ್ತಿಯಾಗಿರುವಂತೆ ತೋರುವುದಿಲ್ಲ.

ರತ್ನಗಿರಿ ಜೈಲಿನಲ್ಲಿರುವ ಗುಜರಾತ ವಿದ್ಯಾಪೀಠದ ಪ್ರೊಫೆಸರಾದ ಅಪ್ಪಾ ಸಾಹೇಬ್ ಪಟವರ್ಧನ್‌ರವರು ತನ್ನ ಜೈಲು ಕೆಲಸದೊಂದಿಗೆ ತೋಟಿ ಕೆಲಸ ಮಾಡಲು ಬಿಡಬೇಕೆಂದು ಕೇಳಿಕೊಂಡಷ್ಟಕ್ಕೆ ಅಧಿಕಾರಿಗಳು ಸ್ವಲ್ಪದಿವಸ ಬಿಟ್ಟು, ನಂತರ ನಿಲ್ಲಿಸಿ ಬಿಟ್ಟದ್ದರಿಂದ ಅವರು ಪಾರ್ಶ್ವ ಉಪವಾಸವ್ರತವನ್ನು ಕೈಕೊಂಡರು. ಇದನ್ನು ತಿಳಿದು ಮಹಾತ್ಮಗಾಂಧಿಯವರು ತನ್ನ ಸ್ನೇಹಿತ ಪಟ್ವರ್ಧನರವರ ನ್ಯಾಯವಾದ ಕೋರಿಕೆಯನ್ನು ನಡಿಸಿ ಕೊಡದೆ ಹೋದರೆ ತಾನೂ ಉಪವಾಸ ಮಾಡುವನೆಂದು ಸರ್ಕಾರಕ್ಕೆ ಬರೆದರು. ಸರ್ಕಾರದವರು ಆಗುವುದಿಲ್ಲವೆಂದು ಕಠಿಣ ತರದ ಜವಾಬು ಕೊಟ್ಟದ್ದರಿಂದ ಮಹಾತ್ಮರು ಕಳೆದ ಶನಿವಾರ ಉಪವಾಸವನ್ನು ಕೈಕೊಂಡರು. ಕೂಡಲೇ ಜೈಲುಗಳ ಮುಖ್ಯಾಧಿಕಾರಿಯು ಗಾಂಧಿಯವರಲ್ಲಿಗೆ ಹೋಗಿ ತಾನು ಬುಧವಾರದೊಳಗೆ ಸದರಿ ವಿಷಯವನ್ನು ಸರಿಪಡಿಸುತ್ತೇನೆಂದು ಹೇಳಿದ್ದರಿಂದ 24 ಗಂಟೆಗಳ ನಂತರ ಮಹಾತ್ಮರು ಉಪವಾಸಬಿಟ್ಟರು. ಅಷ್ಟರಲ್ಲಿ ಅವರ ತೂಕ 6 ಪೌಂಡು ಕಡಿಮೆಯಾಗಿತ್ತು. ಆ ವಿಷಯ ವಿಚಾರ ನಡಿಯುತ್ತಿರುವುದರಿಂದ ಪಟ್ವರ್ಧನ್‌ರವರೂ ಉಪವಾಸವನ್ನು ಬಿಟ್ಟರುವರು.

ಕೊಡಗಿನ ಭವಿಷ್ಯತ್ತು.

ಸುಂಟಿಕೊಪ್ಪ ನಾಡಿನ ಗರ್ವಾಲೆ, ತಿರಂಗಳ್ಳಿ, ಕಿರುದಾಲೆ, ಮೂವತ್ತೊಕ್ಲು, ಇಗ್ಗೋಡ್ಲು, ಹಾಡಗೇರಿ, ಜಾಬೂರು ಕುಂಬೂರು ಮತ್ತು ಮೂದಾಪುರ ಗ್ರಾಮಸ್ಥರ ವಿಶೇಷ ಸಭೆಯೊಂದು ಈ ತಾ. 2ರಲ್ಲಿ ಮೂದಾಪುರ ಮಠದಲ್ಲಿ ಮೆ. ಏನುತಿಯಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 100 ಜನರು ಹಾಜರಿದ್ದರು.

ಮೆ. ಗಳಾದ ವಾಸೂರ ಕಾರ್ಯಪ್ಪನವರು, ಮುಕ್ಕಾಟಿರ ಮೂದಪ್ಪನವರು, ಬ. ಅ. ಪೂವಯ್ಯನವರು, ಒ. ಪೂವಯ್ಯನವರು, ಚೋಕಿರ ಮಂದಣ್ಣನವರು ಮತ್ತು ಮುಕ್ಕಾಟಿರ ಶಂಗಪ್ಪನವರು—ಕೊಡಗನ್ನು ಬೇರೆ ಯಾವ ಸ್ವಾಂತ್ಯಕ್ಕೂ ಸೇರಿಸದೆ, ಸ್ವತ್ಯೇಕವಾಗಿಟ್ಟುಕೊಂಡು ಸ್ವಾಂತೀಕ ಸ್ವಾತಂತ್ರ್ಯ ಸರ್ಕಾರ ಪಡೆಯಲು ಪ್ರಯತ್ನಿಸಬೇಕೆಂದು ಮುಂತಾಗಿಯೂ, ಅಧ್ಯಕ್ಷರು—ಹಿಂದೂ ದೇಶದಲ್ಲಾ ಹಾಗೆಯೇ ಕೊಡಗಿನಲ್ಲೂ ಸ್ವರಾಜ್ಯದ ಹೋರಾಟವು ನಡೆಯುತ್ತಿರುವಾಗ್ಯೆ, ಆ ಹೋರಾಟದಲ್ಲಿ ಕಷ್ಟಪಡುವವರನ್ನು ಬಿಟ್ಟು ನಾವು ಯಾವ ತೀರ್ಮಾನವನ್ನಾದರೂ ಮಾಡಿದರೂ ಸಾಯಲ್ಲವೆಂತ ವೋಲಾಗಿಯೂ ಮಾತಾಡಿದ ಮೇಲೆ ಈ ಕೆಳಗಿನ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

"ಕಾಂಗ್ರೆಸಿಗು ಮತ್ತು ಸರ್ಕಾರಕ್ಕು ನಡೆಯುತ್ತಿರುವ ಹೋರಾಟವು ತೀರಿ, ಖಾನೂನು ಭಂಗ ಚಳವಳಿವು ನಿಂತು, ದೇಶದಲ್ಲಿ ಶಾಂತಿಕೆ ಉಂಟಾಗುವ ವರೆಗೆ, ಕೊಡಗಿನ ಭವಿಷ್ಯತ್ತನ್ನು ತೀರ್ಮಾನಿಸುವ ಚಳವಳಿವನ್ನು ಈ ಸಭೆಯು ವಿರೋಧಿಸುತ್ತದೆ."

ವಿ. ಕಾರ್ಯಪ್ಪ,
(ಅಧ್ಯಕ್ಷರು.)

(ಸೂಚನೆ—ಸ್ಥಳ ಸಂಕೋಚದಿಂದ ಭಾಷಣಗಳ ವಿವರವನ್ನು ಹಾಕಲು ಸಾಧ್ಯವಾಗಲಿಲ್ಲ. ಸಂ. ಕೊ)

COORG CIVIL SURGEON'S OFFICE.
Mercara, the 3rd December 1932,

NOTICE.

Sealed tenders for the hiring out of calves to the Vaccine Depot at Mercara for one year commencing from 1st April 1933 to 31st March 1934 will be received at the Civil Surgeon's Office, Mercara, upto 11 a. m on Friday the 20th January 1933.

For terms and other particulars apply to the Vaccine Inspector or the Civil Surgeon's Office at Mercara.

D. FRAMJEE,
Offg. Civil Surgeon, Coorg.

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ. 3—12—1932.

ನೋಟೀಸು.

1933ನೇ ಏಪ್ರಿಲ್ 1ರಿಂದ 1934ನೇ ಮಾರ್ಚ್ 31ರ ವರೆಗೆ ಒಂದು ವರ್ಷ ಮಡಿಕೇರಿ ವೇಕ್ಸಿನ್ ಇಲಾಖೆಗೆ ಕರಗಳನ್ನು ಬಾಡಿಗೆಗೆ ಕೊಡಲು ಮುದ್ರೆ ಹಾಕಿದ ದರಕಾಸ್ತುಗಳು (ಟೆಂಡರ್ಸ್) ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ 1933ನೇ ಇಸವಿ ಜನವರಿ 20ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಯ ವರೆಗೆ ತೆಗೆದುಕೊಳ್ಳಲಾಗುವವು.

ಶರತ್ತುಗಳು ಮತ್ತು ವಿವರಗಳಿಗೆ ವೇಕ್ಸಿನ್ ಇನ್ಸ್‌ಪೆಕ್ಟರಿಗೆ ಅಥವಾ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿಗೆ ಬರೆದು ಕೊಳ್ಳುವುದು.

ಡಿ ಫ್ರಾವ್ಜಿ,
2—1 ಅಫಿಷಿಯೇಟಿಂಗ್ ಸಿವಿಲ್ ಸರ್ಜನ್, ಕೊಡಗು

ಕರ್ನಾಟಕ ಸಾಹಿತ್ಯ ಪರಿಷತ್ತು=ಗಿಲನೆಯ ಅಧಿವೇಶನ ಮಡಿಕೇರಿ.

ಪ್ರಕಟಣೆ ೫.

ಈ ಸಾರಿಯ ಅಧಿವೇಶನವು ಮಡಿಕೇರಿಯಲ್ಲಿ ತಾ. 28—12—32 ರಲ್ಲು ನಡೆಯುವದಾಗಿ ನಿಶ್ಚೈಸಿರುವದಷ್ಟೆ. ಈ ಸಂದರ್ಭದಲ್ಲಿ ಕೊಡಗು ದೇಶದ ಚರಿತ್ರೆ, ಜನಜೀವನ, ಸಾಹಿತ್ಯಕಲಾ ಪ್ರದರ್ಶನವೊಂದನ್ನು ನಡಸಲು ನಿಶ್ಚೈಸಿರುತ್ತದೆ. ಇದರ ಬಳಿಯಲಿಯೇ ಕನ್ನಡ ಪತ್ರಿಕೆಗಳ ಮತ್ತು ಉತ್ತಮ ಪುಸ್ತಕಗಳ ಪ್ರದರ್ಶನ ಶಾಖೆಯೂ ಇರಿಸಲ್ಪಡುತ್ತದೆ. ಅದು ಕಾರಣ ಬರಹಗಾರರೂ, ವೃತ್ತ ಪತ್ರ ಸಂಪಾದಕರೂ ತಮ್ಮ ಪುಸ್ತಕ ವ ಪತ್ರಿಕೆಗಳ ೨ ಪ್ರತಿಗಳನ್ನು ಪ್ರದರ್ಶನದ ಕಾರ್ಯದರ್ಶಿ ಮೆ. ಬಿ. ಎನ್. ಕೃಷ್ಣಮೂರ್ತಿ, ಗರ್ಲ್ಸ್ ಹೈಸ್ಕೂಲ್, ಮಡಿಕೇರಿ. ಇವರ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಕೋರಿದೆ ಕನ್ನಡ ಪ್ರಾಂತ್ಯವಾದ ಕೊಡಗಿನಲ್ಲಿ ಬರಹಗಾರರಿಗೆ ಇದಕ್ಕಿಂತ ಒಳ್ಳೆಯ ಪ್ರಕಟಣೆಯ ಬೇರೊಂದಿರದು.

ಪ್ರಕಟಣೆ ೬.

ಕೊಡಗು ದೇಶದ ಸಮಸ್ತರಲ್ಲಿ ವಿಜ್ಞಾಪನೆ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ವೇಳೆ ಮಡಿಕೇರಿಯಲ್ಲಿ ಕೊಡಗು ದೇಶದ ಚರಿತ್ರೆ, ಜನಜೀವನ, ಸಾಹಿತ್ಯ ಕಲಾಪ್ರದರ್ಶನವೊಂದನ್ನು ಜಂಗಿಸಬೇಕೆಂದು ಸ್ವಾಗತ ಕಮಿಟಿಯವರು ನಿಶ್ಚಯಿಸಿರುವರು. ಈಗಾಗಲೇ ಹಲವು ಮಹನೀಯರು ಇದಕ್ಕೆ ತಮ್ಮಲ್ಲಿಯ ಅಮೂಲ್ಯ ವಸ್ತುಗಳನ್ನು ಕೊಟ್ಟು ಸಹಾಯ ಮಾಡುತ್ತಿದ್ದರೂ ದೇಶದ ಸಮಸ್ತರೂ ಸೇರಿ ಅದನ್ನು ಇನ್ನೂ ಯಶಸ್ವಿಯಾಗಿ ಮಾಡಬೇಕೆಂದು ಕೋರುವೆವು. ಪ್ರದರ್ಶನಕ್ಕೆ ಕಳುಹಿಸುವ ವಸ್ತುಗಳೆಂದರೆ,

1. ತಾಳಪತ್ರದ (ಓಲೆಗರಿಯ) ಪುಸ್ತಕಗಳು (ಕನ್ನಡ ಅಕ್ಷರದವು).
2. ಹಳೆಯ ಬರವಣಿಗೆಯ ವಹಿಗಳು.
3. ರಾಜರ ಕಾಲಕ್ಕೆ ಸಂಬಂಧಿಸಿದ, ಚಿತ್ರ, ಬರವಣಿಗೆ ಮುತ್ತು, ಇತರ ಸಾಮಾನುಗಳು (ಒಡಿಕತ್ತಿ, ಕೋವಿ, ಖಡ್ಗಗಳು ದೊರಕಿದೆ.)
4. ರಾಜರ ಕಾಲದ ಛತ್ರ, ಚಾಮರ, ದರ್ಬಾರು ಅಂಗಿ, ರುಮಾಲು, ಕಬ್ಬಿಣದ ಕವಚ, ಗುರಾಣಿ ಇವುಗಳು.
5. ಹಳೆ ಕಾಲದ ಶಾಸನ, ನಿರೂಪ ಇತ್ಯಾದಿಗಳು.
6. ಕೊಡಗು ದೇಶಸ್ಥರೇ ಬಿಡಿಸಿರಬಹುದಾದ ಚಿತ್ರಗಳು, ಮೂಡಿರಬಹುದಾದ ಕೆತ್ತನೆಯ ಕೆಲಸ, ವಿಗ್ರಹ ಇತ್ಯಾದಿಗಳು.

ಇವನ್ನು ಪ್ರದರ್ಶನದ ಕಾರ್ಯದರ್ಶಿ ಮೆ. ಬಿ. ಎನ್. ಕೃಷ್ಣಮೂರ್ತಿ, ಗರ್ಲ್ಸ್ ಹೈಸ್ಕೂಲ್ ಮಡಿಕೇರಿ, ಇವರ ವಿಳಾಸಕ್ಕೆ ಕಳುಹಿಸಿಕೊಡಬೇಕು. ಕಳುಹಿಸಿಕೊಡಲು ಅನುಕೂಲವಿಲ್ಲದಿದ್ದಲ್ಲಿ ಸದರಿಯವರಿಗೆ ತಿಳಿಸಿದಲ್ಲು ಅದನ್ನು ತರಿಸಿಕೊಳ್ಳುವ ಏರ್ಪಾಡನ್ನು ಅವರು ಮಾಡುವರು. ಪ್ರದರ್ಶಿಸಲ್ಪಟ್ಟ ವಸ್ತುಗಳ ಭದ್ರತೆ, ಜವಾಬ್ದಾರಿ ಎಲ್ಲವೂ ಸುರಕ್ಷಿತವಾಗಿರುವವು. ಅದು ಕಾರಣ ಕೊಡಗು ದೇಶದಲ್ಲಿ ಇದೇ ಮೊದಲಾಗಿ ಏರ್ಪಾರಂಭಿಸಿರುವ ಈ ಕಾರ್ಯಕ್ಕೆ ಕೊಡಗಿನ ಸಮಸ್ತರೂ, ಮುಖ್ಯವಾಗಿ ವೀರಶೈವ ಮತಾಧಿಪತಿಗಳೂ ಸಹಕರಿಸಿ ಪ್ರದರ್ಶನವನ್ನು ಯಶಸ್ವಿಯಾಗಿ ಮಾಡಬೇಕಾಗಿ ಕೋರಿದೆ.

ಸ್ವಾಗತ ಮಂಡಳಿ, ಜಂಟಿ ಕಾರ್ಯದರ್ಶಿಗಳು.
ಕ. ಸಾ. ಪರಿಷತ್ತು. ೧—೧೨—೧೯೩೨.

ಪತ್ರವ್ಯವಹಾರ.

[ಚಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ರಾಜಿಗೆ ತಿರಸ್ಕಾರ.

ಅಯ್ಯಾ,

ಕಳೆದ 5 ವರ್ಷಗಳಿಂದ ಬೆಟ್ಟತ್ತೂರಿನವರಿಗೂ, ಮನೆಯಪಂಡ ಮನೆಯವರಿಗೂ ನಡೆಯುತ್ತಿರುವ ವಿವಾದದಲ್ಲಿ ತನ್ನ ಕುಟುಂಬಸ್ಥರೊಡನೆ ಬಂದು ರಾಜಿಯಿಂದ ತೀರ್ಮಾನಿಸಿಕೊಳ್ಳುವದಾಗಿ ಮೆ. ಮನೆಯಪಂಡ ಜಿ. ಸುಬ್ಬಯ್ಯನವರು ನಾಡವರಿಗೆ ಭರವಸೆಕೊಟ್ಟ ಮೇರೆ, ಉಭಯ ಕಡೆಯವರು ಸೇರಬೇಕೆಂದು ನಿಶ್ಚೈಸಿಕೊಂಡಿದ್ದ ದಿನಸ, ಗೊತ್ತುಮಾಡಿದ ಸ್ಥಳಕ್ಕೆ ನಾಡನವರು ಸೇರಿ ಸಾಯಂಕಾಲದ ವರೆಗೆ ಕಾದಾಗ್ಯೂ ಕೂಡ ಮೆ. ಸುಬ್ಬಯ್ಯನವರಾಗಲೀ ಯಾ ಕುಟುಂಬಸ್ಥರಾಗಲೀ ಯಾರೊಬ್ಬರೂ ಬಾರದೆಯೂ, ಕಾರಣ ತಿಳಿಸದೆಯೂ ಹೋದದರಿಂದ ನಾಡಿನವರು ಮುಂದಿನ ಕಾರ್ಯವನ್ನು ತೀರ್ಮಾನಿಸಿ ಸ್ಥಳ ಬಿಡಬೇಕಾದರೆ ಕತ್ತಲಾಗುತ್ತಾಬಂದು ದೂರದವರಿಗೆ ಮನೆ ಸೇರುವುದು ತುಂಬಾ ಕಷ್ಟಸಾಧ್ಯವಾಯಿತು.

ನಡೆಯುವ ವಿದ್ಯಮಾನಗಳನ್ನೆಲ್ಲ ಜನ್ನಾಗಿ ಪರಿಶೀಲಿಸಿದರೆ ಸತ್ಯಕ್ಕೂ, ನ್ಯಾಯಕ್ಕೂ, ಧರ್ಮಕ್ಕೂ ವಿರುದ್ಧವಾಗದ ರಾಜಿಯಿಂದ ನಾಡಿನ ನೆಮ್ಮದಿಯನ್ನು ಕಾಪಾಡುವದು ಕಷ್ಟ ಸಾಧ್ಯವೆಂತಲೂ, ಅವುಗಳಿಗೆ ವಿರುದ್ಧವಾದ ರಾಜಿಯೇ ಸುಲಭ ಸಾಧ್ಯವೆಂತಲೂ ಬುದ್ಧಿವಂತರು, ನಾಯವಾದಿಗಳು ಭರವಸೆಯಿಂದ ಬಿತ್ತಿರುವ ಬೀಜವು ಹಲವು ಕೆಲವರಲ್ಲಿ ಮೊಳಕೆ ಹುಟ್ಟಿರುವಂತೆ ಕಾಣುತ್ತೆ. ಇದೆಂಥಾ ಮಂತ್ರ ಶಕ್ತಿಯ ಬೀಜವೆಂಬದು ತಿಳಿಯಲಸಾಧ್ಯವಾಗಿದೆ.

ಹಾಜರಿದ್ದವ.

ಶ್ರೀಮಂಗಲ ನಾಡಿನ ಪತ್ರ.

ಅಯ್ಯಾ,

ತಾರೀಕು 25—11—32 ರ ನಿಮ್ಮ ಪತ್ರಿಕೆಯಲ್ಲು ಪೊನ್ನಂಪೇಟೆಯ ಪತ್ರ ಬರೆದ ಸುದ್ದಿಗಾರರಿಗೆ ಮತಿಕ್ಕೊಂದು ಸುದ್ದಿ ತಿಳಿಯಲಿಲ್ಲವೇ ? ತಾ. 21—11—32 ರಲ್ಲು ಪೊನ್ನಂಪೇಟೆಯಲ್ಲು ಶಾಲೆಗೆ ಸಮ್ಮಂಧಿಸಿ ನೆಡೆದ ಎಟಿಂಗು ನೋಟೀಸು ಕಿಗ್ಗಟ್ಟುನಾಡು ಜನರ ಎಟಿಂಗು ಎಂಬದಾಗಿ ಪ್ರಕಟಿಸಿದೆ ಹಾಗೆಯೇ ತರಾವುಗಳು ಸಹ ಪಾಸಾಗಿರುವವು. ನಿಜವಾಗಿ ಅಲ್ಲಿ ನೆರೆದಿದ್ದ ಸಮುದಾಯವು 80 ಕ್ಕೆ ಎರಿತ್ತಿಲ್ಲ. ಕಿಗ್ಗಟ್ಟುನಾಡಿನಲ್ಲಿ ಶ್ರೀಮಂಗಲನಾಡು ಸಹ ಅಡಕವಾಗಿದೆಯೆಂಬದನ್ನು ಎಟಿಂಗು ಏರ್ಪಾಡು ಮಾಡಿದವರು ಮರೆಯಜಾರದಿತ್ತು. ಎಟಿಂಗು ಏರ್ಪಾಡು ಮಾಡಿದವರು ಯಾವ ಆಲೋಚನೆಯನ್ನು ಮುಂದಿಟ್ಟು ಕಿಗ್ಗಟ್ಟುನಾಡಿನವರ ಎಟಿಂಗು ಎಂದು ಪ್ರಕಟಿಸಿದರೋ ತಿಳಿಯದು. ಅವರು ಅದರ ಅಭಿಪ್ರಾಯವನ್ನು ತಿಳಿಸಿದರೆ ನಾನು ಅದಕ್ಕೆ ಜವಾಬು ಕೊಡುವೆನು. ಯಾವದಕ್ಕೂ ಇದು ಕಿಗ್ಗಟ್ಟುನಾಡಿನವರ ಎಟಿಂಗು ಅಲ್ಲವೆಂದೂ, ಬರೀ ಪೊನ್ನಂಪೇಟೆ ಸುತ್ತು ಮತ್ತಲಿನವರ ಎಟಿಂಗು ಎಂದೂ ಎಲ್ಲರೂ ತಿಳಕೊಳ್ಳಬೇಕಾಗಿ ಈ ಮೂಲಕ ಕೋರುತ್ತೇನೆ.

'ಶ್ರೀಮಂಗಲನಾಡಿನವ'

ಸ್ವದೇಶಾಭಿಮಾನ.

ಸ್ವದೇಶಾಭಿಮಾನಕ್ಕೆ ಸ್ವದೇಶಾಚಾರದಲ್ಲಿ ಮಮತೆಯೇ ಮೂಲ ಕಾರಣವು. ಶ್ಲೋ. ಆಚಾರಃ ಪ್ರಥಮೋಧರ್ಮಃ| ಹಾಗೆಂದು ಮಹಾತ್ಮರ ವಚನವೇ ಇದಕ್ಕೆ ಸಾಕ್ಷಿಯೊಗಿರುತ್ತದೆ. ಅಲ್ಲದೆ—

ಕುಲಧರ್ಮಾನ್ ಜಾತಿಧರ್ಮಾನ್ ದೇಶಧರ್ಮಾನ್ ಮಹೇಶ್ವರ| ಯೇತ್ಯಜಂತಿಜನಾವಶ್ಯಂ ಕುಲಾಚ್ಚ್ಯುತಿತಾಹಿತೆ॥

ಅವರವರ ಕುಲಾಚಾರವನ್ನೂ ಆಯಾಯ ಜಾತಿ ನೀತಿಗಳನ್ನೂ ಮತ್ತು ಯಾವ ದೇಶದಲ್ಲಿ ಯಾವ ವಿಧದ ಆಚಾರಗಳಾಗಲೀ ನಡತೆಗಳಾಗಲೀ ಇರುತ್ತವೋ, ಅಂಥಾದ್ದನ್ನು ದೇಶಾಭಿಮಾನಿಗಳು ಬಿಡದೆ ಕಾಪಾಡಬೇಕಾಗಿಯೂ, ಒಂದುವೇಳೆ ಇದ್ದಲ್ಲಿ ವಿಶ್ವಾಸವಿಡದೆ ಕುಶಿ ಬಂದ ಹಾಗೆ ಪ್ರವರ್ತಿಸಿದರೆ ಅದರಿಂದ ಕುಲಭ್ರಷ್ಟವಾಗುವದೆಂದು ಇದರ ತಾತ್ಪರ್ಯ.

ಶ್ಲೋ॥ ದೋಷೈರೇತೈಃಕುಲಘ್ನಾನಾಂ ವರ್ಣಸಂಕರಕಾರಕೈಃ| ಉತ್ಸಾದ್ಯಂತೇಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ॥

ಮೇಲೆ ಹೇಳದಂತೆ ಕುಲಾಚಾರವನ್ನು ಕೆಡಿಸಿದವರು ವರ್ಣಸಂಕರ ಮೂಡುವ ದೋಷಗಳಿಂದಲೇ ಶಾಶ್ವತವಾದ ಕುಲಧರ್ಮವೂ ಜಾತಿ ಧರ್ಮವೂ ಕೆಡುಪದು. ಇದರಿಂದ ಮಹಾಪಾಪಕರ್ಮಕ್ಕೊಳಗಾಗುವರೆಂದು ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿದೆ. ಹೀಗಿರುವ ಕಾರಣ ನಮ್ಮ ದೇಶಾಭಿಮಾನಿಗಳು ಕುಲಾಚಾರ ಮತ್ತು ದೇಶಾಚಾರಗಳಲ್ಲಿ ವಿಶ್ವಾಸವಿಟ್ಟು ಜಾತಿ ಪದ್ಧತಿಗಳನ್ನ ವಲಂಬಿಸಿ, ತಿಳಿಯದವರಿಗೆ ಜಾತಿ ಸಂಕರ ಮೂಡದಂತೆ ಪ್ರೋತ್ಸಾಹಗೊಳಿಸಿ ದೇಶಾಭಿಮಾನಿಗಳೆಂಬವನು ಕೀರ್ತಿ ಪಾತ್ರರಾಗುವದು ಇತರರಿಗೆ ಮೇಲ್ಪಂಕ್ತಿಯಾಗಿದೆ

ವಿ. ಪದ್ಮನಾಭಾಚಾರ್ಯ.

ಬೆಟ್ಟತ್ತೂರು ಒಳರಸ್ತೆಗಳು.

ಕೊಡಗು ಕಮಿಶನರ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಸಾಹೇಬರವರಲ್ಲಿ ವಿನಂತಿ.

ಕಾರ್ಗುಂದದಿಂದ ಬಂದು ಬೆಟ್ಟತ್ತೂರಿಗಾಗಿ ಕಲ್ಲಳ್ಳ ಗ್ರಾಮಕ್ಕೆ ಹೋಗುವದು ಒಂದು, ಮತ್ತು ಅವಂದೂರು ಗಾಡಿ ರಸ್ತೆಯಿಂದ ಬೆಟ್ಟತ್ತೂರಿಗೆ ಬರುವದು ಇನ್ನೊಂದು. ಅಂತು 2 ಒಳ ರಸ್ತೆಗಳೂ ಮತ್ತುಮದೆಗಾಗಿ ಬೆಟ್ಟತ್ತೂರಿಗೆ ಬರುವ ಗಾಡಿ ರಸ್ತೆ ಒಂದು ಸಹ ಇರುತ್ತೆ.

ಗಾಡಿ ರಸ್ತೆಗೆ ಮಂಜೂರಾದ ರೂಪಾಯಿಗಿಂತ ಡಬ್ಬಲಾಗಿ ಕೆಲಸ ಮೂಡಿ ತಾ. 16—11—32ಕ್ಕೆ ತೀರಿಸಿರುತ್ತೇವೆ. ಇದರ ಹಣವನ್ನು ಕೊಡಲು ಕೂಡ್ಲೆ ಏರ್ಪಾಡಿ ಆಗಬೇಕು.

ಮೇಲ್ಕಂಡ 2 ಒಳರಸ್ತೆಗಳ ರಿಪೇರಿಗೆ ಈಗ ಸ್ವಲ್ಪ ವರ್ಷಗಳಿಂದ ಕೊಡುತ್ತಿದ್ದ ಹಣವೂ ಈ ವರ್ಷ ಕೊಡದಿರಲು ಕಾರಣ ಗೊತ್ತಾಗುವದಿಲ್ಲ.

ಮೇಲ್ಕಂಡ ದಾರಿಗಳಲ್ಲಿ ಮುಳ್ಳು, ಕಾಡು ವಗೈರೆ ಮುಚ್ಚಿದಲ್ಲದೆ, ಕೆಲವೆಡೆ ಗುಂಡಿ ಕೊರಕಲು ಬಿದ್ದು ಜನರಿಗೆ ಸಂಚಾರಕ್ಕೆ ತುಂಬಾ ಅಡಚಣೆಯಾಗಿರುತ್ತೆ.

ಈ ತೊಂದರೆಯನ್ನು ನೋಡಿ ನಮ್ಮ ಗ್ರಾಮದ ಸಹಕಾರಿ ಸಂಘದ ಪ್ರೆಸಿಡೆಂಟರಾದ ಮೆ. ಆಲೆಮಾಡಂಡ ಗಣಪತಿಯವರು ಅತಿಯಾಗಿ ಗುಂಡಿ ಕೊರಕಲು ಬಿದ್ದು ಮತ್ತು ಮುಳ್ಳು ಕಾಡು ಕವಿದುಕೊಂಡಿರುವಷ್ಟಾದರೂ ನಾವು ರಿಪೇರಿ ಮಾಡಬೇಕೆಂತ ವಗೈರೆ ಹೇಳಿದ್ದರಿಂದಲೂ, ಈ ದಾರಿಗಳು ನಮಗೆ ಅವಶ್ಯವಿರುವುದರಿಂದಲೂ 2 ದಾರಿಗಳಿಂದ ಸುಮಾರು 4 ಮೈಲು ನಾವು ಗ್ರಾಮಸ್ಥರು ಕತ್ತಿ ಗುದ್ದಲಿ ಕೆಲಸ ಸಹ ಮೂಡಿರುತ್ತೇವೆ.

ಈ ದಾರಿಗಳಿಗೆ ಮೂಮೂಲು ಕೊಡುತ್ತಿದ್ದ ರಿಪೇರಿ ಹಣವನ್ನು ಮಣ್ಣು ಜಾಗುವ ಮುಂಜೆ ಕೂಡ್ಲೆ ಕೊಟ್ಟು ಪೂರ್ತಿ ಕೆಲಸ ಮೂಡಿಸಬೇಕಾಗಿಯೂ, ಮತ್ತು ಗಾಡಿರಸ್ತೆಯ ಚದರಡಿಗಳನ್ನು ಮೇ ತಾರೀಕು ಆಖೈರಿನಲ್ಲು ರಿಪೇರಿ ಬಗ್ಗೆ ಕಿಂಚಿತ 25/ ರೂಪಾಯಿಗಳನ್ನು ಸಹ ಕೊಡುವಂತೆ ಮಂಜೂರು ಮಾಡಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

'ಗ್ರಾಮಸ್ಥರು.'

ಹುದಿಕೇರಿಯ ಪತ್ರ.

ರಸ್ತೆದೀಪಗಳು—ಪೇಟೆಬೀದಿಯ ಲ್ಯಾಂಪುಗಳು ಹಗಲು ಕಾಣುತ್ತವೆ. ರಾತ್ರೆ 7 ಗಂಟೆ ನಂತರ ಕಾಣದೆ ಮೂಯುವಾಗುತ್ತವೆ ಇದೇನಾಶ್ಚರ್ಯ! ನೀವೆಣ್ಣೆಗೆ ಕೈಯವಾದರೆ ಹಗಲು ಮೂಯುವಾಗುತ್ತವೋ ತಿಳಿಯದು. ಹೊಸ ಜಾವಿಯ ಒತ್ತು ಒಂದು ಲ್ಯಾಂಪನ್ನಾದರೂ ಹಗಲೂ, ರಾತ್ರಿಯೂ ಇರುವಂತೆ ಇಲಾಖೆಯ ಅಧಿಕಾರಿಗಳು ನಿಗವಿಡುವದಿಲ್ಲವೇಕೆ?

ಚಿನ್ನದ ವ್ಯಾಪಾರ—ಹುದಿಕೇರಿಯಲ್ಲು ಚಿನ್ನ ವ್ಯಾಪಾರಿಗಳು ಹೆಚ್ಚುತ್ತಿದ್ದಾರೆ. 'ಹುಚ್ಚಣ್ಣ' ಶೆಟ್ಟರ ದುಡ್ಡು; ಚಿನ್ನದ ಮೇಲೆ ವ್ಯಾಪಾರವಾಗುತ್ತಿದೆ. ಸಾಲಕೇಳುವವರಿಗೆ, ಇಲ್ಲ ವ್ಯಾ—ನನ್ನ ಕೈಲಿ ಏಲ್ಲಿಂದಾ, ಅನ್ನುವರು. ಚಿನ್ನಕ್ಕೆ ಹಣ ಕೊಡುತ್ತೀಕಾ, ವಡವೆ ಉಂಟು, ಶೆಟ್ರೇ ? ನನಗೆ ಬೇಸ, ನೋಡುವ ಅತೂನು, ಎಂದೆನ್ನುತ್ತಾ ಶೆಟ್ಟರ ಪೆಟ್ಟಿಗೆಯಿಂದ ವೆಲ್ಲ ಮುಡ್ಡ ಹೊರಬೀಳುತ್ತೆ. ಇದೂ 100 ರೂಪಾಯಿ ಬೆಲೆ ಬಾಳುವ ಚಿನ್ನಕ್ಕೆ 40 ರೂಪಾಯಿ. ಹೇಗೂ ವಡವೆಗಳು ಇರುವ ವರೆಗೆ ದುಡ್ಡು ಬೇಕಷ್ಟೆ!

ಹೊಟೇಲುಗಳ ಪೈಪೋಟಿ—ಲೆಕ್ಕವಿಲ್ಲದಷ್ಟು ಇವೆ. ಆದರೇನು, ಸಮುದಕ್ಕೆ ಒಂದೂ ಇಲ್ಲ. ಈಗ ಒಂದು 'ದರ್ಬಾರ್ ಹೊಟೇಲ್' ಆಗುವ ಏರ್ಪಾಡು ನಡೆಯುತ್ತಿದೆ. ಇದರ ಪರಿಣಾಮವೇನೋ ತಿಳಿಯದು.

ಹುದಿಕೇರಿ ಟೌನು ಸಂಘ—ನಿರ್ನಾಮವಾಗುವ ಸುದರ್ಭ ಬಂದೊದಗಿದೆ. ಇದರ ವಾರ್ಷಿಕ ಜನರಲ್ ಎಟಿಂಗಿನಲ್ಲು ಸಾಹುಕಾರರುಗಳಿಗೆ ಬೇರೆ ಸ್ಥಳ ಏರ್ಪಡಿಸಿ, ಕಾರ್ಜ ಕೊಟ್ಟು ಕೂರಿಸಿ, 2 ಗಂಟೆ ಭೋಜನವಾದರೂ ಅವರ ದುಡ್ಡು ಹೊರಬೀಳಲಿಲ್ಲ. ಭತ್ತಕ್ಕೆ ಹಣ ಕೇಳುವವರಿಗೂ, ಡಬ್ಬಲ್ ನೋಟು ಬರೆಯುವವರಿಗೂ ಮೊತ್ತ ಇವರ ದುಡ್ಡು ಪ್ರಯೋಜನಕ್ಕೆ ಬಂದು, ಹೊರಬೀಳುತ್ತದೆಯಲ್ಲದೆ ಸಹಕಾರಿಗಳ ಪ್ರಯೋಜನಕ್ಕಾಗಿ ಸಂಘಗಳಲ್ಲು ಡಿವಾಜಿಟ್ಟು ಇಡುವ ದುಡ್ಡು, ಪಾಪ ಎಲ್ಲಿಂದ ಬಂದೀತು ? ಎಲ್ಲರೂ ಒಂದಾದರೆ ಅವರ ದುಡ್ಡು ಕೇಳುವವರ್ಯಾರು ? ಹೇಗೂ ನಮ್ಮಲ್ಲು ಸಾಹುಕಾರರಿಗೆ ಕಮ್ಮಿ ಇಲ್ಲ. ಸಾವಿರ ಕುದುರೆಗೆ ಒಬ್ಬೊಬ್ಬ ಸಾಹುಕಾರರಿದ್ದಾರೆ. ಆದರೆ ಕೂರಲಿಕ್ಕೆ ಒಂದೂ ಕುದುರೆಯಿಲ್ಲ. ಈ ವಿಚಾರ ಹೆಚ್ಚೇಕೆ. ಅವರು ಸಹಕಾರಿಗಳೇ; ಅವರ ಸಹಕಾರ ವಿಚಾರ ನಂತರ ಪುನಹ ಬರೆಯುವೆನು.

"ಪಟ್ಟಣಿಗ"

ಪೊನ್ನಂಪೇಟೆ ಟೌನ್ ಸಂಘದ ಅದ್ಭುತ ಕಾರ್ಯ.

ಅಯ್ಯಾ,

ನಿಮ್ಮ ತಾ. 25—11—32ರ ಪತ್ರಿಕೆಯಲ್ಲು ಸಂಘದ ಜನರಲ್ ಎಟಿಂಗಿನ ವಿಷಯದ ಬಾತ್ಮಿಯನ್ನು ಓದಿದೆನು. ಸದರಿ ಬಾತ್ಮಿ ಬರೆದ ಸುದ್ದಿಗಾರರಿಗೆ ಮೆ. ಸಿ. ಎ. ಪೊನ್ನಪ್ಪನವರ ಹೆಸರು ಮೊತ್ತ ಗೊತ್ತಾಯಿತೋ ? ಅವರ ಮೊತಿಗೆ ವತ್ತಾಸೆಯಾಗಿ ಮೊತಾಡಿದವರ ಹೆಸರುಗಳು ಅವರಿಗೆ ತಿಳಿಯದೆ ಇರಲು ಕಾರಣವೇನು ? ಅಲ್ಲದೆ ಅಧ್ಯಕ್ಷರ ಅನುಮತಿಯಂತೆ ಹೊಸ ಮೂಪಿಳ್ಳೆ ಮೆಂಬರರ ಅರ್ಜಿ ಏಲೆ ಮೂಡಬಹುದೆಂದು ಕೆಲವರು ಹೇಳಿದರೆಂದು ಬರೆದಿದೆ. ಆದರೆ ಕೊಡನೆ ಮೆಂಬರನು ಅರ್ಜಿ ಕೊಟ್ಟದಕ್ಕೆ ಅಧ್ಯಕ್ಷರು ಕೂಡ ಮೇಲೆ ಆಗಲೆಂದು ಸಂಘದ ಇ 'ಸ್ಪೆಕ್ಟರವರು ಹೇಳಿ, ಅದು ಬಾಕಿಯೂದ ಸಂಗತಿಯೂಕೆ ಬರೆಯಲಿಲ್ಲ ? ಹಾಗಾಗದರೆ ಅವರಿಗೆ ಹೆಸರಿಲ್ಲವೋ ? ಇದೀಗ ಸಹಕಾರದ ತತ್ವ ! ಈ ತತ್ವ ಹೊಸದೋ, ಹಳೆಯದೋ ತಿಳಿಯದು. ಹೊಸ ಮೆಂಬರರ ಅಪ್ಲಿಕೇಶನ್ ಮುಂಜೂರಿನಿಂದ ಎಟಿಂಗು ಆಗಬೇಕೆಂದು ನ್ಯಾಯ ಕೇಳಿದ ಮೂತ್ರಕ್ಕೆ ಅಧ್ಯಕ್ಷರು ಸಮೂಧಾನದ ಏಲೆ ಮೂಡಲಾರದೆ ಎದ್ದು ಹೋದದ್ದು, ಅನು ಸಂಘದ ಇನ್‌ಸ್ಪೆಕ್ಟರಾದವರಿಗೆ ಸರಿಯೋ? ಹಾಗಾದರೆ ಸಹಕಾರ ಸಂಘವೆಂಬದು ಸರಿ, ಯಾ ಅಲ್ಲವೆಂಬದು ಇವರಿಂದ ಮನವರಿಕೆಯಾಗುತ್ತಿಯಲ್ಲವೇ ? ಇದನ್ನು ನೋಡಿದ ಯಾರ ಮನಸು ತಾನೇ ದೇಸರಿಕೆಯನ್ನು ಸೂಚಿಸಲಾರದು ? ಇದರಿಂದ ಸುದ್ದಿಗಾರರೆಂಬ ಬಾತ್ಮಿದಾರರು, ಅವರು ಮನಸಿನ ನಿರ್ಚಿಂತೆಯ ಗುಣವನ್ನು ತೋರಿಸದರಲ್ಲದೆ, ಎಟಿಂಗಿನಲ್ಲು ನ್ಯಾಯ ವಿಚಾರದ ಮೂತುಗಳೇ ನಡೆದದ್ದಾಗಿದೆ. ಅಧ್ಯಕ್ಷರು ಸಹ ಅದೇ ವರ್ಗಕ್ಕೆ ಸೇರಿರಬಹುದೆಂದು ಅವರು ಸರಿಪಡಿಸಲಾರದೆ ಎದ್ದು ಹೋಗಿದ್ದರಿಂದ ವೇದ್ಯವಾಗುತ್ತೆ ಎಂಬದು ವಾಚಕ ಮಹಾಶಯರಿಗೆ ತಿಳಿಯಲಾರದೆ ಇರದು. ಮುಂದೆ ಮುಂದಕ್ಕೂ ಈ ತರದ ಅರೋಪಣೆಗಳು ಹೊರಡುತ್ತಾ ಬಂದಲ್ಲು ಸಹಕಾರ ಸಂಘಗಳೆಲ್ಲಾ ಭಂಗ ರೂಪದಿಂದ ಬದಿಗೊತ್ತಿ ಮತಿಗೆಟ್ಟು ಹೋಗಬಹುದೆಂದು ವ್ಯಸನ ಪಡಬೇಕಾಗಿದೆ. ಇಂಥಾ ಆರೋಪಣೆಯ ಬಾತ್ಮಿಗಳಿಗೆ ಗಮನ ಕೊಡಬಾರದೆಂತಾಗಿ ಈ ಬಾತ್ಮಿ ಬರೆದದ್ದಾಗಿದೆ.

'ಹಾಜರಿದ್ದ ಮೆಂಬರು'

ಶ್ರೀ ಚೌಡೇಶ್ವರಿ ದೇವಾಲಯದ ಕಟ್ಟಡ.

ಅಯ್ಯಾ,

ಮಡಿಕೇರಿ ಮಹದೇವಪೇಟೆ ದೇವಾಂಗ ಮಂಡಳಿಯವರು ತಮ್ಮಲ್ಲಿ ಕಮಿಟಿ ಏರ್ಪಾಡಿನ ಮೇಲೆ ಶ್ರೀ ಚೌಡೇಶ್ವರಿ ದೇವಾಲಯದ ಕಾರುಬಾರು ನಡಿಸುವಂತಾಗಿಯೂ, ಕೈಕೊಂಡ ಸದರಿ ದೇವಾಲಯದ ಕಾರುಬಾರು ನಡಿಸುವ ಕಮಿಟಿ ಮೆಂಬರುಗಳಲ್ಲಿ ಮುತುವರ್ದಿ ಇಲ್ಲದೆ ಒಬ್ಬರ ಮೇಲೆ ಒಬ್ಬರು ಭಾರ ಹಾಕಿಕೊಂಡು, ಅನನು ಮಾಡಲಿ, ಇನ್ನೊಬ್ಬ ಮಾಡಲಿ, ಮು

ಕೊಬ್ಬು ಮಾಡಲಿ, ನನಗೇನು; ಒಬ್ಬನು ಹೇಳಿದ ಹಾಗೆ ಕೇಳಬೇಕೆ? ಪೈಸಿಡೇಟಿನು ಕೂತಲ್ಲಿಯೇ, ಮೆಂಒರುಗಳು ತಮ್ಮ ತಮ್ಮ ಕೆಲಸದಲ್ಲಿಯೇ ಇದ್ದು ಸ್ವಕಾರ್ಯದಲ್ಲಿ ಮಗ್ನರಾಗಿ ಇರುವವರಾಗಿಯೂ ಇದ್ದಾರೆ. ದೇವಾಲಯ, ಮಠ, ಛತ್ರ, ಬಾವಿ, ಕೆರೆ, ತೋಪು, ವಿದ್ಯಾ ಶಾಲೆ, ವಾಚನಾ ಮಂದಿರ ಮುಂತಾದ ಸನಾತನಕಾಲದಿಂದ ಬಂದಿರುವ ಧರ್ಮಕಾರ್ಯಗಳಿಗೆ, ಉದ್ಧಾರ ಕಾರ್ಯಗಳಿಗೆ ಮನಸಿಡದ ಒಂದು ಕಮಿಟಿಯು ಇದ್ದು ಪ್ರಯೋಜನವಿಲ್ಲ. ಅಲ್ಲದೆ ಇದು ತನ್ನ ಮತದ ಉದ್ಧಾರ ಕಾರ್ಯದ ಮೂತಾಗಿದೆ. ಈ ಕಮಿಟಿಯ ಒಬ್ಬಿಬ್ಬರು ತುಂಬಾ ಶ್ರಮ ತೆಗೆದುಕೊಂಡು ಮರ ವೂರಾ ತಂದು ಹಾಕಿ ಬಿದ್ದಿರುವುದು ಬಿದ್ದಾಯೇ. ಹಣಕಾಸು ಇರುವುದು ಇದ್ದಲ್ಲಿಲ್ಲಿಯೇ, ಹೆಚ್ಚಿಗೆ ಕೊಡುವದಾಗಿ ವಾಗ್ದಾನ ಮಾಡಿರುವವರ ಹಣವು ಮಾಡಿರುವವರಲ್ಲಿಯೇ ಆಗಿ ಹೋಗಿರುವದಾಗಿದೆ. ಹಾಲಿ ಸದರಿ ಕಟ್ಟಡವು ಊರ್ಜಿತವಾಗುವುದಕ್ಕೆ ತಕ್ಕಲವಾಗಿರುತ್ತೆ. ಮಳೆಗಾಲವೂ ಕಳೆದಿರುವದರಿಂದ ಕೈಕೊಂಡಿರುವ ಕೆಲಸವನ್ನು ಪೂರೈಸದೆ ಧೋರಣೆಯಿಂದಲೂ, ಮುಪ್ಪರದಿಂದಲೂ ಬಾಕಿ ಮಾಡುವುದು ತಿಳಿದವರಿಗೆ ನ್ಯಾಯವಲ್ಲ. ನವಿಗಳೂ ಗಿಡ ನೃಕ್ಷಗಳೂ ಸಹ ಪರರ ಉಪಕಾರಕ್ಕಾಗಿ ತಮ್ಮ ಸರ್ವ ಸ್ವವನ್ನೂ ಅರ್ಪಿಸಿರುವುದು ತಿಳಿದ ಸಂಗತಿಯೂಗಿರುವುದರಿಂದ ಇದು ಒಂದು ಉಪಕಾರವಾಗಿರುವ ಕಾರ್ಯವೆಂದು ಭಾವಿಸಿ ಈ ಕಟ್ಟಡಕ್ಕೆ ಒಂದು ಪ್ರತ್ಯೇಕ ಕಮಿಟಿಯನ್ನಾದರೂ ಏರ್ಪಡಿಸಿ ಆ ಮುಖೇನ ಕಾರ್ಯ ನಿರ್ವಹಿಸಬೇಕಾದ್ದು ಅಗತ್ಯ. ಮತ್ತು ಯಾರಿಗೂ ಬಾಧಕವಿಲ್ಲ. ಆದ್ದರಿಂದ ಸದರಿ ಕಮಿಟಿಯವರು ದಯವಿಟ್ಟು ಸದರಿ ಕಾರ್ಯಕ್ಕೆ ಅವಲಂಭಿಸಿ ಜೀರ್ಣೋದ್ಧಾರವೂಡುವರೆ ಭಾಗಿಗಳಾಗುವರೆಂದು ಹಾರೈಸುವ. ಆದರೆ ಇದಕ್ಕೂ ನಿಗಾಕೊಡದೆ ಹೋದರೆ ಈ ಭಾರವು ಅನಂದೇ ಆಗಿರುತ್ತೆ. ಹೆಚ್ಚಿಗೆ ಹೇಳಲು ಸಾಧ್ಯವಿಲ್ಲ.

'ಮತಾಭಿನೂನಿ'

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ

ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ,

ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸರಕಾರದಲ್ಲಿಡಬೇಕಾದ ಠೇವಣಾತಿ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾಗಿ ಈ ವರೆಗೆ 26000 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ, ಬಡವರೂ, ಮಿತಸಂಪಾದನೆಯವರೂ, ಜಾತಿ ಮತಗಳ ಬೇಧವಿಲ್ಲದೆ ಜಾತಿವಾರೂ, ಕೋಮುವಾರೂ, ಹೆಂಗಸರೂ, ಗಂಡಸರೂ ಹೆಚ್ಚು ರುಸುಂ ಕೊಡಸಿಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸುರುವಿನಲ್ಲಿ ರೂ. 5—8—0ನ್ನು ಮಾತ್ರ ಕಟ್ಟತಕ್ಕದ್ದು. ಅನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲು ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆದುಕೊಳ್ಳಬೇಡಿ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಹರಾಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯನ್. ಬಿ. ಕರುಂಬಯ್ಯ.
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—8 ನಾಪೋಕ್ಲು. (ಕೊಡಗು.)

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ರಸಾಯನ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(52—17) ಮಾತು ಕಂಪೆನಿ,
ಗಿರಗಾಂವ, ಮುಂಬಯಿ,

ಇಂಡಿಯಾ ಎಕ್ವಿಟೇಬಲ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮು ಶಾಯಿ 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಸರ್,
'ಪೂವಯ್ಯ ವಿಲ್ಲ,'
(12—14) ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52—14 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬಾಂಕ್,
ಲಿಮಿಟೆಡ್ ಕೂ ಆಕ್ಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿಸಲ್ಪಟ್ಟದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,670— 0—0
ಜಮೂಬಂದ ಠೇವಣಾತಿ	—	23,150—13—9
ವಸೂಲಾದ ಕ್ಷೇಮನಿಧಿ	—	45,868—14—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಬಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,
ಪಟ್ಟಮಾಡ ದೇವೈಯ್ಯನವರು,
ರಾವ್ ಬಹದ್ದೂರ್.

ಪ್ರೈಜರರ್
ಮನೆಯಪ್ಪಂಡ ಬೆಳ್ಯಪ್ಪ
ನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್;
ಕಾರೀಕು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಪೆ. ಚೌರಿರ ಮೂದ್ಯಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
ಮತ್ತು ಅರಮಣಮೂಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮೂದಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೂಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನ್ನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ಸರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಒಮೂ ಖರ್ಚಿನ ರಿಜಸ್ಟರ್ ಪುಸ್ತಕಗಳೂ ಮತ್ತು ಜೆಂ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿೂರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ **ಕಡಿಮೆ ಖರ್ಚಿನ** ಮತ್ತು **ಉತ್ತಮವಾದ ನಡಿಸುವಿಕೆಯಿಂದಲೂ** ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಪೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಡಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾಲ್‌ಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ನುಡಿಕೇರಿ	ರಾಂಚಿ	ವಿಶಾಖಪಟ್ಟಣ [52—41

ಕಣ್ಣು ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—48 ಗಿರಿಗಾಂವ, ಮುಂಬಯಿ.

ಕಾರ್ಡು ಬರೆದರೆ ತಾಗಿನ ಕ್ಯಾಟಲಾಗು ಮೂಫಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬರ್ಚಿಗಳು, ಕೋಟೆಗಳು, ಕೈಬಂದೂಕುಗಳು, ಮತ್ತು ಮುಂತಾದ ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
26—14 **210 Abdul Rehiman Street, BOMBAY.**

Printed & published by P. I. Belliappa at "Kodagu" Press, Mercara for "Kodagu" Ltd